# ಹಂಪಿ ಟೈಮ್ಸ್
HAMPI TIMES
ಕನ್ನಡ ದಿನಪತ್ರಿಕೆ
KANNADA DAILY
ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA
epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026
ಸಂಪುಟ:02 • ಸಂಚಿಕೆ: 138 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 30.11.2024 • ಶನಿವಾರ • ಪುಟ:04 • ಬೆಲೆ:2
Volume:02 • Issue: 138 • PRGI No:KARKAN/2023/88055 • VIJAYANAGARA • 30.11.2024 • Saturday • Page:04 • Rs:2



BOOK YOUR ADVERTISEMENTS TO REACH MORE READERS
1,00,000+
Digital E-PAPER READERS
M: 94486 33038
Book Advance Get More Benefits
No.1 HAMPI TIMES LEADING VIJAYANAGARA District News Paper

ಮನಸ್ಸು ಮಾಡು ಕರ್ತವ್ಯ ನಿಷ್ಠನಾಗು ಕಾದು ನೋಡು
ಪುಟ: 3ರಲ್ಲಿ ನೋಡಿ
ಈ ಬಾರಿ SSLC ವಿದ್ಯಾರ್ಥಿಗಳಿಗೆ ಸುವರ್ಣಾವಕಾಶ!
ವಿದ್ಯಾರ್ಥಿಗಳು ಹೆಚ್ಚು ಅಂಕಗಳಿಸಲು ಸುಲಭ ಮಾರ್ಗೋಪಾಯಗಳು
ದಿನಕ್ಕೊಂದು ವಿಷಯ ಹಂಪಿ ಟೈಮ್ಸ್ ಮಾರ್ಗದರ್ಶಿಯಲ್ಲಿ
SSLC ಪರೀಕ್ಷೆ ವಂಚಿತರು, ಆಕಾಂಕ್ಷಿಗಳು ಹಂಪಿ ಟೈಮ್ಸ್ ದಿನಪತ್ರಿಕೆಯಲ್ಲಿನ ದಿನಕ್ಕೊಂದು ವಿಷಯಗಳನ್ನು ಓದಿಕೊಂಡು ಪರೀಕ್ಷೆಗೆ ಸಿದ್ಧಗೊಳ್ಳಲು ಹಂಪಿ ಟೈಮ್ಸ್ ಮಾರ್ಗದರ್ಶಿ ಸಹಕಾರಿಯಾಗಲಿದೆ... ಇ-ಪೇಪರ್‌ನಲ್ಲೂ ಲಭ್ಯ...
ಹಂಪಿ ಟೈಮ್ಸ್ ಇ-ಪೇಪರ್
94486 33038 www.hampitimes.com / epaper.hampitimes.com Vijayanagara hampitimes@gmail.com


**ಮೈಕ್ರೋ ನ್ಯೂಸ್**

## ಡಿ.02 ಬಾಲ್ಯವಿವಾಹ, ಪೋಕ್ಸೋ, ಆರ್‌ಟಿಇ ಕಾಯ್ದೆ ಹಾಗೂ ಮಕ್ಕಳ ರಕ್ಷಣೆ' ತರಬೇತಿ ಕಾರ್ಯಕ್ರಮ

**ಹಂಪಿ ಟೈಮ್ಸ್ ಬಳ್ಳಾರಿ**
ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಬೆಂಗಳೂರು, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಇವರ ಸಂಯುಕ್ತಾಶ್ರಯದಲ್ಲಿ 'ಬಾಲ್ಯವಿವಾಹ, ಪೋಕ್ಸೋ, ಆರ್.ಟಿ.ಐ ಕಾಯ್ದೆ ಹಾಗೂ ಮಕ್ಕಳ ರಕ್ಷಣೆ' ಕುರಿತು ಜಿಲ್ಲಾ, ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ ಒಂದು ದಿನದ ಕಾರ್ಯಾಗಾರವನ್ನು ಡಿ.02 ರಂದು ಬೆಳಿಗ್ಗೆ 10 ಗಂಟೆಗೆ ಜಿಲ್ಲಾ ಪಂಚಾಯತ್‌ನ ನಜೀರ್ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ. ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯರಾದ ಶಶಿಧರ ಕೋಸಂಬೆ ಅವರು ಕಾರ್ಯಕ್ರಮ ಉದ್ಘಾಟಿಸುವರು. ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ ಮಿಶ್ರಾ ಅವರು ಅಧ್ಯಕ್ಷತೆ ವಹಿಸಲಿದ್ದಾರೆ.

## ಇಂದು ವಿದ್ಯುತ್ ವ್ಯತ್ಯಯ

**ಹಂಪಿ ಟೈಮ್ಸ್ ಬಳ್ಳಾರಿ**
ಬಳ್ಳಾರಿ ನಗರ ಜೆಸ್ಕಾಂ ಉಪವಿಭಾಗ–2 ರ ವ್ಯಾಪ್ತಿಯ ಫೀಡರ್ 1 ರ ಹೆಚ್ಚುವರಿ ವಿದ್ಯುತ್ ಪರಿವರ್ತಕ ಕಾರ್ಯವನ್ನು ಕೈಗೊಳ್ಳುತ್ತಿರುವುರಿಂದ ಡಿ.30 ರಂದು ಬೆಳಿಗ್ಗೆ 10 ಗಂಟೆಯಿಂದ ಸಂಜೆ 04 ಗಂಟೆಯವರೆಗೆ ನಗರದ ಕಪ್ಪಗಲ್ಲು ರಸ್ತೆ, ಸಿದ್ದಾರ್ಥ ನಗರ ಕಾಲೋನಿ, ಹೌಸಿಂಗ್ ಬೋರ್ಡ್, ಬೀಚಿ ನಗರ, ಕೆ.ಇ.ಬಿ ಕ್ವಾಟರ್ಸ್, ಭಗತ್‌ಸಿಂಗ್ ನಗರ, ಹೆಚ್‌ಡಿಎಫ್‌ಸಿ ಬ್ಯಾಂಕ್, ಎಸಿ ಸ್ಟ್ರೀಟ್, ಬಾಲಾಜಿ ನರ್ಸಿಂಗ್ ಹೋಮ್, ಲಾ ಕಾಲೇಜು, ಮುಲ್ಲಂಗಿ ಲೇಔಟ್, ಕನಕದುರ್ಗ ಲೇಔಟ್ ಪ್ರದೇಶಗಳ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು ತಿಳಿಸಿದ್ದಾರೆ.

# ಅಭ್ಯಾಸದಲ್ಲಿ ಸ್ಪರ್ಧೆ ಇರಲಿ

### ಡಿಸಿಪಿಐ ಓ.ಆರ್.ಪ್ರಕಾಶ್ ಹೇಳಿಕೆ | ಜಿಲ್ಲಾ ಮಟ್ಟದ ಗಣಿತ ವಿಚಾರ ಸಂಕಿರಣ ಗಣಿತ ಕಲಿಕೆಯಲ್ಲಿ ಹರಪನಹಳ್ಳಿ ಮುಂದು, ಹೊಸಪೇಟೆ ಹಿಂದುಳಿದಿದೆ



**ಹಂಪಿ ಟೈಮ್ಸ್ ಹೊಸಪೇಟೆ**
ವಿಜಯನಗರ ಜಿಲ್ಲೆಯಲ್ಲಿ ಮಕ್ಕಳು ಕಲಿಕೆಯಲ್ಲಿ ಹಿಂದುಳಿದಿದ್ದಾರೆ. ಅವರಿಗೆ ವಿದ್ಯಾಭ್ಯಾಸದಲ್ಲಿ ಸ್ಪರ್ಧಾ ಮನೋಬಾವ ಮೂಡಿಸಿದರೆ ಮಾತ್ರ ಮಕ್ಕಳು ಕಲಿಕೆಯಲ್ಲಿ ಪ್ರಗತಿಕಾಣಲು ಸಾಧ್ಯ ಎಂದು ಶಾಲಾ ಶಿಕ್ಷಣ ಇಲಾಖೆ ಉಪ ನಿರ್ದೇಶಕರಾದ ಓ.ಆರ್.ಪ್ರಕಾಶ್ ಅವರು ಅಭಿಪ್ರಾಯಪಟ್ಟರು.

ಗ್ರಾಮೀಣಾಬಿವೃದ್ಧಿ ಮತ್ತು ಪಂಚಾಯಿತ್ ರಾಜ್ ಇಲಾಖೆ, ಶಾಲಾ ಶಿಕ್ಷಣ ಇಲಾಖೆ ಮತ್ತು ಅಕ್ಷರ ಫೌಂಡೇಶನ್ ಇವರ ಸಂಯುಕ್ತಾಶ್ರಯದಲ್ಲಿ, ಜಿಲ್ಲಾ ಪಂಚಾಯಿತ್ ಸಭಾಂಗಣದಲ್ಲಿ ಶುಕ್ರವಾರ ನಡೆದ ಜಿಲ್ಲಾ ಮಟ್ಟದ ಗಣಿತ ವಿಚಾರ ಸಂಕಿರಣ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಶಿಕ್ಷಕರು ಮತ್ತು ಪೋಷಕರು ಮಕ್ಕಳ ಸಮಗ್ರ ಶೈಕ್ಷಣಿಕ ಅಭಿವೃದ್ಧಿಗೆ ಶ್ರಮವಹಿಸಬೇಕು. ಗಣಿತ ಕಲಿಕಾ ಆಂದೋಲನದ ವರದಿಯ ಪ್ರಕಾರ ಜಿಲ್ಲೆಯ ಎಲ್ಲ ತಾಲೂಕುಗಳಿಗೆ ಹೋಲಿಸಿದರೆ ಹರಪನಹಳ್ಳಿ ತಾಲೂಕು ಪ್ರಗತಿಯಲ್ಲಿದೆ, ಹೊಸಪೇಟೆ ತಾಲೂಕು ಹಿಂದುಳಿದಿದೆ. ಶಿಕ್ಷಕರು, ಈ ವರದಿಯನ್ನು ಅವಲೋಕಿಸಿ ಮಕ್ಕಳು ಯಾವುದರಲ್ಲಿ ಹಿಂದುಳಿದಿದ್ದಾರೆ, ಆ ವಿಷಯಗಳಿಗೆ ಹೆಚ್ಚು ಒತ್ತು ನೀಡುವುದರ ಮೂಲಕ ಮಕ್ಕಳಿಗೆ ವಿದ್ಯಾಭ್ಯಾಸದ ಅಭಿರುಚಿ ಹೆಚ್ಚಿಸಬೇಕು ಎಂದು ಹೇಳಿದರು.

ಅಕ್ಷರ ಫೌಂಡೇಶನ್‌ನ ಪ್ರೋಗ್ರಾಮ್ ಮ್ಯಾನೇಜರ್ ಹೆಚ್.ಬಿ.ಕಣ್ಣಿ ಮಾತನಾಡಿ, ಶಾಲಾ ಶಿಕ್ಷಣ ಇಲಾಖೆ, ಗ್ರಾಮ ಪಂಚಾಯಿತಿಗಳು ಹಾಗೂ ಸಮುದಾಯಗಳ ಸಹಭಾಗಿತ್ವದಲ್ಲಿ ನಡೆದ ಗಣಿತ ಕಲಿಕಾ ಆಂದೋಲನವು ಯಶಸ್ವಿಯಾಗಿ ಮುಕ್ತಾಯವಾಗಿದೆ. ಮಕ್ಕಳ ಗುಣಾತ್ಮಕ ಶಿಕ್ಷಣಕ್ಕಾಗಿ ಅಕ್ಷರ ಫೌಂಡೇಶನ್ ಹಾಗೂ ಶಾಲಾ ಶಿಕ್ಷಣ ಇಲಾಖೆ ಸಹಭಾಗಿತ್ವದಲ್ಲಿ ಕೆಲಸ ಮಾಡುತ್ತದೆ. ಈ ಆಂದೋಲನದ ವರದಿಯ ಪ್ರಕಾರ ಪ್ರತಿ ವರ್ಷಕಿಂತ ಈ ವರ್ಷ ಹೆಚ್ಚಿನ ಫಲಿತಾಂಶ ಬಂದಿರುವುದು ಕಂಡುಬರುತ್ತದೆ. ಜಿಲ್ಲೆಯಲ್ಲಿ 756 ಶಾಲೆಗಳ 23,385 ಮಕ್ಕಳು ಭಾಗವಹಿಸಿದ್ದು, ಈ ಆಂದೋಲನಕ್ಕೆ ಗ್ರಾಮ ಪಂಚಾಯಿತಿಗಳು ಹಾಗೂ ಶಾಲಾ ಶಿಕ್ಷಕರ ಕಾರ್ಯ ಶ್ಲಾಘನೀಯ. ಅಕ್ಷರ ಫೌಂಡೇಶನ್ ವತಿಯಿಂದ ಜಿಕೆ 2.7 ಕೋರ್ಸ್ ಪರಿಚಯಿಸಿದ್ದು, ಎಲ್ಲ ಶಿಕ್ಷಕರು ಇದರ ಸದುಪಯೋಗ ಪಡೆಸಿಕೊಂಡು ಗಣಿತ ಕಲಿತು, ಮಕ್ಕಳಿಗೆ ಗಣಿತದ ಆಸಕ್ತಿಯನ್ನು ಇನ್ನಷ್ಟು ಹೆಚ್ಚಿಸಬಹುದು ಎಂದು ಹೇಳಿದರು.


ಕಾರ್ಯಕ್ರಮದಲ್ಲಿ 25 ಶಾಲೆಗಳ ಮುಖ್ಯ ಶಿಕ್ಷಕರು ಹಾಗೂ 25 ಗ್ರಾಮ ಪಂಚಾಯಿತಿಗಳ ಅಧ್ಯಕ್ಷರು, ಪಿಡಿಓಗಳಿಗೆ ಸನ್ಮಾನ ಮಾಡಲಾಯಿತು.

ಕಾರ್ಯಕ್ರಮದಲ್ಲಿ ಕೂಡ್ಲಿಗಿ ತಾಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿ ಪದ್ಮನಾಭ, ಶಾಲಾ ಶಿಕ್ಷಣ ಇಲಾಖೆಯ ಕವಿತಾ ಸೇರಿದಂತೆ ಗ್ರಾಮ ಪಂಚಾಯಿತಗಳ ಅಧ್ಯಕ್ಷರು, ಪಿಡಿಓಗಳು ಹಾಗೂ ಶಿಕ್ಷಕರು ಉಪಸ್ಥಿತರಿದ್ದರು.

# ನಿಲ್ದಾಣದ ಪುಸ್ತಕ ಗೂಡು ವ್ಯವಸ್ಥೆಗೆ ಮೆಚ್ಚುಗೆ

### ಅಕ್ಷರ ಪ್ರೇಮಿಗಳಿಗೆ ಆನಂದ ತಂದ ಬಸ್ ನಿಲ್ದಾಣ | ಪುಸ್ತಕ ಲೇಖಕರ ಹೆಸರು ಮೆಲುಕು ಹಾಕಿದ ಓದುಗರು

**ಹಂಪಿ ಟೈಮ್ಸ್ ಕೊಟ್ಟೂರು**
ತಾಲೂಕಿನ ಹ್ಯಾಳ್ಯಾ ಗ್ರಾಮದ ಬಸ್ ನಿಲ್ದಾಣದಲ್ಲಿನ "ಪುಸ್ತಕ ಗೂಡು" ಅರಿವು ಮತ್ತು ಮಾಹಿತಿ ಕೇಂದ್ರಕ್ಕೆ ವಿಜಯನಗರ ಜಿಲ್ಲೆಯ ಜಿಲ್ಲಾ ಪಂಚಾಯಿತಿ ಸಹಾಯಕ ಉಪ ಕಾರ್ಯದರ್ಶಿ ಮೌನೇಶ ವಿ.ಬಿ ಭೇಟಿ ನೀಡಿ ಗ್ರಂಥಾಲಯ ಮೇಲ್ವಚಾರಕರ ಕಾರ್ಯಕ್ಕೆ ಪ್ರಶಂಸೆ ವ್ಯಕ್ತಪಡಿಸಿ ಮುಚ್ಚುಗೆ ಸೂಚಿಸಿದರು.




ನಿಲ್ದಾಣದ ಗ್ರಂಥಾಲಯದಲ್ಲಿ ಕಪಾಟು ಮಾದರಿಯಲ್ಲಿ ಅಳವಡಿಸಿರುವ ಪುಸ್ತಕ ಮತ್ತು ರಿಜಿಸ್ಟರ್ ಬುಕ್ಕ ಹಾಗೂ ಕಂಪ್ಯೂಟರ ಉಪಕರಣಗಳ ಬಗ್ಗೆ ಮಾಹಿತಿ ಪಡೆದರು.

ಈ ವೇಳೆ ಗ್ರಾಮಾಭಿವೃದ್ದಿ ಅಧಿಕಾರಿ ಸಿಹೆಚ್‌ಎಂ ಗಂಗಾಧರ ಹಾಗೂ ಗ್ರಂಥಾಲಯ ಮೇಲ್ವಿಚಾರಕರು ಬಿ.ಲೋಕೇಶ್, ಗ್ರಾಪಂ ಕಂಪ್ಯೂಟರ್ ಆಪರೇಟರ್ ಸ್ವತಂತ್ರಕುಮಾರ ಹಾಗೂ ಗ್ರಾಪಂ ಸೆಕ್ರೇಟರಿ ಓದುಗರು ಹಾಜರಿದ್ದರು.

## ಡಿ.4 ಸರ್ಕಾರಿ ನೌಕರರ ಸಂಘದ ಚುನಾವಣೆ
# ಮೂರು ಸ್ಥಾನಕ್ಕೆ ಆರು ಜನ ಕಣದಲ್ಲಿ
## ವಿಜಯನಗರ ಜಿಲ್ಲಾಧ್ಯಕ್ಷ, ರಾಜ್ಯಪರಿಷತ್ ಜಿಲ್ಲಾ ಖಜಾಂಚಿ ಸ್ಥಾನಕ್ಕೆ ಪೈಪೋಟಿ

**ಹಂಪಿ ಟೈಮ್ಸ್ ಹೊಸಪೇಟೆ**
ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ವಿಜಯನಗರ ಜಿಲ್ಲಾ ಶಾಖೆಗೆ ಡಿ.4 ರಂದು ಮೂರು ಪದಾಧಿಕಾರಿಗಳ ಸ್ಥಾನಗಳಿಗೆ



ಚುನಾವಣೆ ನಡೆಯಲಿದೆ. ಅಂತಿಮ ಕಣದಲ್ಲಿ ಆರು ಆಕಾಂಕ್ಷಿಗಳು ಸ್ಪರ್ಧಿಸಿದ್ದಾರೆ ಎಂದು ಜಿಲ್ಲಾ ಚುನಾವಣಾಧಿಕಾರಿ ಲಿಯಾಖತ್ ಅಲಿ ತಿಲಿಸಿದ್ದಾರೆ.

ನ.29 ರವರೆಗೆ ನಾಮಪತ್ರ ಹಿಂಪಡೆಯಲು ಅವಕಾಶವಿತ್ತು. ಜಿಲ್ಲಾ ಖಜಾಂಚಿ ಸ್ಥಾನಕ್ಕೆ ನಾಮಪತ್ರ ಸಲ್ಲಿಸಿದ್ದ ಮನೋಹರ ಎನ್.ಜಿ. ನಾಮಪತ್ರ ಹಿಂಪಡೆದಿದ್ದಾರೆ. ಅಂತಿಮವಾಗಿ ಕಣದಲ್ಲಿ ಜಿಲ್ಲಾ ಜಿಲ್ಲಾಧ್ಯಕ್ಷ ಸ್ಥಾನಕ್ಕೆ ಜಿ. ಮಲ್ಲಿಕಾರ್ಜುನಗೌಡ ಮತ್ತು ರಾಜೀವ್ ಹೆಚ್. ಸ್ಪರ್ಧಿಸಿದ್ದಾರೆ. ರಾಜ್ಯಪರಿಷತ್ ಹುದ್ದೆಗೆ ರಾಘವೇಂದ್ರ ಎಸ್. ಹೆಗಡಿಹಾಳ್ ಮತ್ತು ಸೈಯದ್ ಕಲೀಮ್ ಉಲ್ಲಾ, ಜಿಲ್ಲಾ ಖಜಾಂಚಿ ಹುದ್ದೆಗೆ ಕೆ. ಮಲ್ಲೇಶಪ್ಪ ಮತ್ತು ಮಾಲತೇಶ ಮರೇಗೌಡರ್ ಅಂತಿಮ ಕಣದಲ್ಲಿದ್ದಾರೆ. ಡಿ.4 ರಂದು ಬೆಳಿಗ್ಗೆ 9 ರಿಂದ ಸಂಜೆ 4ರವರೆಗೆ ಸಂಡೂರು ರಸ್ತೆ, ನೌಕರರ ಭವನ, ಹೊಸಪೇಟೆಯಲ್ಲಿ ಮತದಾನ ಜರುಗಲಿದೆ ಎಂದು ತಿಳಿಸಿದ್ದಾರೆ.


ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಕನ್ನಡ ದಿನಪತ್ರಿಕೆ
HAMPI TIMES
BOOK YOUR ADVERTISEMENTS
TO REACH MORE READERS
**Classified Advertisements**
Examples: Job postings, Real estate listings , Matrimonial ads, Lost and found, Services (e.g., tutors, plumbers)
**Display Advertisements**
Examples: Brand promotions, Product launches, Corporate announcements
**Public Notices and Announcements**
Examples: Tender notices, Government announcements, Legal notices, Obituaries
**Recruitment Advertisements**
Examples: Company job openings, Walk-in interviews, Recruitment drives
**Health and Wellness Advertisements**
Examples: Hospitals or clinics, Medical equipment, Health supplements
**Educational Advertisements**
Examples: College admissions, Coaching center promotions, Training programs
**Event Advertisements**
Examples: Cultural programs, Exhibitions, Concerts or festivals
**Retail Advertisements**
Examples: Sales or discounts, New store openings
**Entertainment Advertisements**
Examples: Movie releases, TV show promotions, Theater events
**Political Advertisements**
Campaigns or announcements related to political parties or candidates.
**Real Estate Advertisements**
Ads for buying, selling, or renting property.
**Matrimonial Advertisements**
Personal ads for seeking marriage alliances. Examples: Bride or groom profiles, Community-specific ads
**Product Advertisements**
Examples: Electronics, Automobiles, FMCG products
contact for more information
M: 94 48 63 30 38
Email:- hampitimes@gmail.com


# ಬಾಯಾರಿತು ಎಂದು, ಘಟಕದ ನೀರಿಗೆ ಹೋದೆ

## ನೀರಿಲ್ಲದೆ ತುಕ್ಕಿಡಿದಿದೆ ಕಾತ್ರಿಕೆನಹಟ್ಟಿ ಶುದ್ಧ ಕುಡಿಯುವ ನೀರಿನ ಘಟಕ

### ನಿರ್ವಹಣೆ ನಿರ್ಲಕ್ಷ್ಯ | ಗ್ರಾಮೀಣ ಜನರಿಗಿಲ್ಲ ಶುದ್ಧ ನೀರು | ನೀರಿಗಾಗಿ ನಿತ್ಯ ಪಕ್ಕದೂರಿಗೆ ಓಟ

**ಮಾರೇಶ ತಿಪ್ಪೇಹಳ್ಳಿ ಕೂಡ್ಲಿಗಿ**
ಗ್ರಾಮೀಣ ಜನರ ಆರೋಗ್ಯಕ್ಕಾಗಿ ಸರ್ಕಾರದ ಲಕ್ಷಾಂತರ ರೂ ಅನುದಾನದಲ್ಲಿ ನಿರ್ಮಾಣಗೊಂಡ ಶುದ್ಧ ಕುಡಿಯುವ ನೀರಿನ ಘಟಕ ಸೂಕ್ತ ನಿರ್ವಹಣೆ ಕೊರತೆಯಿಂದ ತುಕ್ಕು ಹಿಡಿದು, ದೃಷ್ಟಿಬೊಂಬೆಯಂತಾಗಿದೆ. ಗ್ರಾಮದ ಜನರು ಶುದ್ಧ ಕುಡಿಯುವ ನೀರಿಗಾಗಿ ನಿತ್ಯ ಪಕ್ಕದ ಹಳ್ಳಿಗೆ ತೆರಳುತ್ತಿದ್ದಾರೆ. ನೀರು ತರಲು ಯುವಕರಿಲ್ಲದ ಮನೆಯಲ್ಲಿ ಗ್ರಾಮದ ಬೋರ್‌ವೆಲ್ ನೀರೇ ಗತಿ ಎಂಬಂತಾಗಿದ್ದು, ಹಳ್ಳಿ ಜನರ ಆರೋಗ್ಯ ದೇವರೇ ಕಾಪಾಡಬೇಕು ಎನ್ನುತ್ತಿದ್ದಾರೆ ಗ್ರಾಮಸ್ಥರು.

ತಾಲೂಕಿನ ಪೂಜಾರಹಳ್ಳಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಕಾತ್ರಿಕೆನಹಟ್ಟಿ ಗ್ರಾಮದಲ್ಲಿ ಶುದ್ಧ ಕುಡಿಯುವ ನೀರಿನ ಘಟಕ ನಿರ್ಮಾಣ ಮಾಡಿ ಹಲವು ವರ್ಷಗಳೆ ಕಳೆದಿವೆ. ದುರಸ್ಥಿಗೀಡಾಗಿದ್ದರನ್ನು ಕೆಲ ಬಾರಿ ತಾತ್ಕಾಲಿಕ ರಿಪೇರಿ ಮಾಡಿಸಿ ನೀರು ಕೊಟ್ಟಿದ್ದಾರೆಯೇ ಹೊರತು, ಶಾಸ್ವತ ನೀರು ಮಾತ್ರ ಕೇಳ್ಬೇಡಿ ಎನ್ನುವಂತಾಗಿದೆ. ನಮ್ಮೂರಲ್ಲಿ ಹೆಸರಿಗೆ ಮಾತ್ರ



ಶುದ್ಧ ಕುಡಿಯುವ ನೀರಿನ ಘಟಕ, ನೀರಿಗಾಗಿ ಪಕ್ಕದೂರಿಗೆ ಹೋಗೋದು ತಪ್ಪಿಲ್ಲ. ನೀರು ತರಲು ಶಕ್ತಿ ಇಲ್ಲದವರೇನು ಮಾಡ್ಬೇಕು, ಇದ್ದ ನೀರನ್ನೇ ಕುಡಿಯುತ್ತೇವೆ. ಸಂಬಂಧಿಸಿದ ಅಧಿಕಾರಿಗಳು ಜನರ ಆರೋಗ್ಯದತ್ತ ಗಮನಹರಿಸಿ ಶುದ್ಧ ಕುಡಿಯುವ ನೀರನ್ನು ಒದಗಿಸಿದರೆ ಗ್ರಾಮೀಣ ಜನರು ನೀರೊದಗಿಸಿದವರನ್ನು ಎಂದೂ ಮರೆಯಲ್ಲ. ನಮ್ಮ ಮಾತು ಯಾರು ಕೇಳ್ತಾರಪ್ಪ ಎನ್ನುತ್ತಾರೆ ಗ್ರಾಮದ ಹಿರಿಯ ಜೀವಿಗಳು.

ಸಮರ್ಪಕ ನೀರು ನೀಡದೇ ನಾನಾ ಕಾರಣಗಳಿಂದ ದುರಸ್ತಿಗೀಡಾಗಿದ್ದು, ನೆಲಕ್ಕುರುಳುವ ಹಂತ ತಲುಪಿದೆ. ಈ ಹಿಂದೆ ಗ್ರಾಮ ಪಂಚಾಯತಿಯ ಅಧಿಕಾರಿಗಳು ಭೇಟಿ ನೀಡಿ, ಸಣ್ಣಪುಟ್ಟ ಉಪಕರಣಗಳು ರಿಪೇರಿ ಮಾಡಿಸಿದ್ದರು. ಆದರೆ ಕಿಡಿಗೇಡಿಗಳ ಕೈಚಳಕದಿಂದ ಪದೇ ಪದೇ ಹಾಳಾಗುವತ್ತಿದೆ, ಆದಷ್ಟು ಶೀಘ್ರ ವಾಗಿ ದುರಸ್ತಿ ದೊಳಿಸಿ ಜನರಿಗೆ ಶುದ್ಧ ನೀರು ನೀಡಬೇಕೆಂಬುದು ಜನರ ಆಗ್ರಹವಾಗಿದೆ.

> ಶುದ್ಧ ಕುಡಿಯುವ ನೀರಿನ ಘಟಕ ಮೂರು ವರ್ಷಗಳ ಹಿಂದೆ ನಿರ್ಮಿಸಲಾಗಿತ್ತು. ಘಟಕ್ಕೆ ಸುರಕ್ಷತೆ ಇಲ್ಲದಂತಾಗಿದೆ. ಕಾಂಪೌಂಡ್ ನಿರ್ಮಿಸಿ ಸೂಕ್ತ ನಿರ್ವಹಣೆ ಮಾಡಬೇಕು. ಇಲ್ಲಿ ನೀರು ತೆಗೆದುಕೊಂಡು ಹೋಗಬೇಕಾದರೆ, ಕರೆನ್ಸಿ ಕಾರ್ಡ್ ಬೇಕಂತಾರೆ. ಸಂಬಂಧಪಟ್ಟ ಅಧಿಕಾರಿಗಳು ಕರೆನ್ಸಿಕಾರ್ಡ್ ಕೊಟ್ಟರೆ ಜನರಿಗೂ ಅನುಕೂಲ.
> – **ಡ್ರೈವರ್ ಓಬಯ್ಯ**
> ಯುವ ಮುಖಂಡ ಕಾತ್ರಿಕೆನ ಹಟ್ಟಿ


> ಪೂಜಾರಹಳ್ಳಿ ಗ್ರಾಮ ಪಂಚಾಯತಿ ವ್ಯಾಪ್ತಿಯ 5 ಗ್ರಾಮಗಳಲ್ಲಿ ಶುದ್ಧ ಕುಡಿ ನೀರಿನ ಘಟಕಗಳಿವೆ. ಅದರಲ್ಲಿ 4 ಗ್ರಾಮಗಳಲ್ಲಿ ಯಾವುದೇ ಸಮಸ್ಯೆ ಇಲ್ಲದಂತೆ ನೀರಿನ ಪೂರೈಕೆ ಆಗುತ್ತವೆ. ಆದರೆ ಕಾತ್ರಿಕೆನಹಟ್ಟಿ ಹಿಂದೊಮ್ಮೆ ದುರಸ್ತಿ ಮಾಡಲಾಗಿದೆ. ಪದೇ ಪದೇ ಅದೇ ರೀತಿ ಸಮಸ್ಯೆ ಉದ್ಭವವಾಗುತ್ತಿದೆ, ಆದಷ್ಟು ಶೀಘ್ರವೇ ಸಮಸ್ಯೆಗೆ ಪರಿಹಾರ ಒದಗಿಸುತ್ತಿವೆ.
> – **ಹೆಚ್. ಸಿ.ನಾರಾಯಣಪ್ಪ**
> ಗ್ರಾಪಂ ಅಭಿವೃದ್ಧಿ ಅಧಿಕಾರಿ, ಪೂಜಾರಹಳ್ಳಿ

# ಸ್ಟುಡೆಂಟ್ ಕಾಲಂ

## ಜಿಂಕೆಯ ಜಾಣತನ



ಅದೊಂದು ದಟ್ಟಕಾಡು. ಅನೇಕ ಪ್ರಾಣಿಗಳು ಅವರಲ್ಲಿ ಆಶ್ರಯ ಪಡೆದಿದ್ದವು. ಅವುಗಳಲ್ಲಿ ಜಿಂಕೆಯೂ ಒಂದು. ಅದು ಜಾಣತನಕ್ಕೆ ಹೆಸರಾಗಿತ್ತು. ಆ ಕಾಡಿನಲ್ಲಿ ಅನೇಕ ತರದ ಮರಗಿಡಗಳು ಇದ್ದುದರಿಂದ ಜಿಂಕೆಗೆ ಆಹಾರದ ಸಮಸ್ಯೆಯೆ ಇರಲಿಲ್ಲ. ಸದಾ ಕಾಲ ವಿಲಾಸದಿಂದ ತಿರುಗಾಡುತ್ತಾ ಜೀವನ ಸಾಗಿಸುತ್ತಿತ್ತು. ಕಾಡಿನ ಪಕ್ಕದಲ್ಲಿ ಒಂದು ನದಿ ಹರಿಯುತ್ತಿತ್ತು. ಅವರಲ್ಲಿದ್ದ ಮೊಸಳೆಗೆ ಜಿಂಕೆಯನ್ನು ತಿನ್ನುವ ಆಸೆ. ಆದರೆ ಜಿಂಕೆಯೋ ನದಿಯ ಬಳಿ ಸುಳಿಯುತ್ತಿರಲಿಲ್ಲ. ಅದಕ್ಕೆ ನೀರಡಿಕೆಯಾದಾಗ ಸ್ವಲ್ಪ ದೂರದಿಂದ ನೋಡಿ, ಮೊಸಳೆ ಅಲ್ಲಿ ಇರದ್ದನ್ನು ಕಂಡ ನಂತರವೇ ಅದು ನೀರು ಕುಡಿದು ಹೋಗುತ್ತಿತ್ತು.



ಒಂದು ದಿನ ಜಿಂಕೆ ಹೀಗೆಯೇ ನದಿ ದಂಡೆ ಬಳಿಬಂದಾಗ, ಆಚೆಗಿನ ದಂಡೆಯ ಮೇಲೆ ಬೆಳೆದಿದ್ದ ಗಿಡ ಕಾಣಿಸಿತು. ಅದರ ತುಂಬ ಹಣ್ಣುಗಳೇ ತುಂಬಿದ್ದವು. "ಆ ಕಡೆ ಹೋಗಿ ಆ ಮರದ ಕೆಳಗೆ ಬಿದ್ದಿರುವ ಹಣ್ಣುಗಳನ್ನು ತಿನ್ನುವುದು ಹೇಗೆ ?"ಎಂಬ ಆಲೋಚನೆ ಇದಕ್ಕೆ ಬಂತು. ಸ್ವಲ್ಪ ಸಮಯದ ಬಳಿಕ ಉಪಾಯವೊಂದು ಹೊಳೆಯಿತು. ನದಿಗೆ ಇನ್ನು ಸಮೀಪ ಬಂದು ಮೊಸಳೆಯನ್ನು ಕೂಗಿ ಕರೆಯಿತು. ನೀರಿನ ಮಧ್ಯದಿಂದ ಮೇಲೆ ಬಂದ ಮೊಸಳೆ "ಏಕೆ ನನ್ನನ್ನು ಕರೆದೆ?" ಎಂದು ಕೇಳಿತು. "ನಾಳೆ ನಾನು ಹುಟ್ಟು ಹಬ್ಬವಿರುವದು, ಕಾರಣ ಭೋಜನ ಕೂಟವನ್ನು ಏರ್ಪಡಿಸಲಿದ್ದೇನೆ. ಅದಕ್ಕೆ ನಿಮ್ಮನ್ನು ಆಹ್ವಾನಿಸಲು ಬಂದಿದ್ದೇನೆ ಆದರೆ ನೀವು ಎಷ್ಟು ಜನ ಇದ್ದೀರೆಂದು ಗೊತ್ತಿಲ್ಲ. ಅವಕ್ಕಾಗಿಯೇ ನಿಮ್ಮ ಸಂಖ್ಯೆ ಗೊತ್ತಾಗಬೇಕು" ಎಂದು ಜಿಂಕೆ ಉತ್ತರಿಸಿತು. "ಹಾಗಾದರೆ ನಾನೇನು ಮಾಡಲಿ? " ಮೊಸಳೆ ಕೇಳಿತು. "ನಿನ್ನ ಸ್ನೇಹಿತರನ್ನೆಲ್ಲ ಮೇಲಕ್ಕೆ ಕರೆ. ಅವರು ಸಾಲಾಗಿ ನಿಲ್ಲಲಿ. ನಾನು ಎಲ್ಲರ ಬೆನ್ನ ಮೇಲೆ ಕಾಲಿಡುತ್ತ ಎಣಿಸುವೆ" ಜಿಂಕೆ ಹೇಳಿತು.

ಮೊಸಳೆ ಕರೆದ ಕೂಡಲೇ ನದಿಯ ಆಳದಲ್ಲಿದ್ದ ಎಲ್ಲ ಮೊಸಳೆಗಳು ಮೇಲೆ ಬಂದವು. ಎಲ್ಲವೂ ಸಾಲಾಗಿ ನಿಂತ, ಜಿಂಕೆ ಒಂದರ ಮೇಲೊಂದರಂತೆ ಎಣಿಸುತ್ತಾ ಎಲ್ಲಾ ಮೊಸಳೆಗಳ ಬೆನ್ನ ಮೇಲೆ ಕಾಲಿಡುತ್ತಾ ಆಚೆ ದಂಡೆ ಕಡೆ ನಡೆಯಿತು. ನದಿ ದಂಡೆಗೆ ಬಂದ ಕೂಡಲೇ ಜಿಂಕೆ ಮೊಸಳೆಯನ್ನು ಉದ್ದೇಶಿಸಿ "ನನ್ನನ್ನು ಈ ದಂಡೆಗೆ ತಲುಪಿಸಿದ್ದಕ್ಕಾಗಿ ನಿಮಗೆಲ್ಲಾ ಧನ್ಯವಾದಗಳು" ಎಂದಿತು. ಇದರಿಂದ ಕೋಪಗೊಂಡ ಮೊಸಳೆಗಳು "ನೀನೊಬ್ಬ ಮೊಸಗಾರ" ಎಂದು ಕೂಗಿದವು. ಆದರೆ ಅಷ್ಟೊತ್ತಿಗಾಗಲೇ ಜಿಂಕೆ ದಂಡೆಯಿಂದ ಬಹುದೂರ ಹೋಗಿತ್ತು.

– ಜಿ. ಸರಸ್ವತಿ 9ನೇ ತರಗತಿ.
ಸರ್ಕಾರಿ ಪ್ರೌಢಶಾಲೆ ಬಸರಕೋಡು. ಹ.ಬೊ.ಹಳ್ಳಿ(ತಾ)

## ಪ್ರೀತಿಯ ವಿದ್ಯಾರ್ಥಿಗಳೇ ನೀವೂ ಬರೆಯಿರಿ

ಪ್ರೀತಿಯ ವಿದ್ಯಾರ್ಥಿಗಳೇ ನಿಮಗಾಗಿ ನಿಮ್ಮ ಬರವಣಿಗೆ ಕೌಶಲ ಹೆಚ್ಚಿಸಿಕೊಳ್ಳಲು **ಹಂಪಿ ಟೈಮ್ಸ್** **ಸ್ಟುಡೆಂಟ್ ಕಾಲಂ ವೇದಿಕೆ** ಕಲ್ಪಿಸಿದೆ. ನೀವು ಸಣ್ಣ ಸಣ್ಣ ಕಥೆ, ಕವನಗಳನ್ನು ಬರೆಯಬಹುದು. ಇಂದೇ ಆರಂಭಿಸಿ ನೀವು ಭವಿಷ್ಯದಲ್ಲಿ ಲೇಖಕರಾಗಿ ಬೆಳೆಯಿರಿ.
ಇ–ಮೇಲ್:hampitimes@gmail.com
M: 94486 33038

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು:**
**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ–ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

# ಪೆಡಂಭೂತಗಳು ಜೀವಂತವಾಗಿದ್ದರೆ...



ಸಾನ್ವಿ ಮತ್ತು ಶಿವು ಕಾರಿನಲ್ಲಿ ಅಪ್ಪ ಅಮ್ಮನ ಜೊತೆ ರಜೆಗೆಂದು ಬೆಂಗಳೂರಿಗೆ ಹೊರಟಿದ್ದಾರೆ. ಬೆಂಗಳೂರು ನಗರಕ್ಕೆ ಕಾರು ಬರುತ್ತಿದ್ದಂತೆ ಟ್ರಾಫಿಕ್ ಜಾಮ್ ಆಯಿತು. ವೀಕೆಂಡ್ ಆಗಿದ್ದರಿಂದ ವಾಹನ ದಟ್ಟಣೆ ಇದೆಯೆಂದು ಕಾರಿನಲ್ಲಿಯೇ ಕುಳಿತರು. ಸ್ವಲ್ಪ ಸಮಯದ ನಂತರ ಇದ್ದಕ್ಕಿದ್ದಂತೆ ಜನರೆಲ್ಲಾ ಚೀರಾಡುತ್ತಾ ಎಲ್ಲೆಂದರಲ್ಲಿ ಓಡತೊಡಗಿದರು. ಏನಾಯ್ತು ಎಂದು ಹೇಳುವವರಿಲ್ಲ. ಎಲ್ಲರೂ ಗಾಬರಿಯಲ್ಲಿ ಜೀವಭಯದಿಂದ ಓಡುತ್ತಿದ್ದಾರೆ. ಮುಂದಿನ ಕೆಲವು ವಾಹನಗಳು, ಅದರಲ್ಲಿನ ಜನರು ಗಾಳಿಯಲ್ಲಿ ತೂರಾಡುತ್ತಿರುವುದು ಕಾಣುತ್ತಿದೆ. ಏನಾಗುತ್ತಿದೆ ಎಂದು ತಿಳಿಯುವಷ್ಟರಲ್ಲಿ ಭಾರೀ ಗಾತ್ರದ ಪ್ರಾಣಿಗಳು ಸಾನ್ವಿ ಮತ್ತು ಶಿವು ಇರುವ ಕಾರಿನಲ್ಲಿ ಬರುತ್ತಿವೆ. ಅವು ಏನೆಂದು ತಿಳಿಯುವಾಸೆ ಸಾನ್ವಿ ಮತ್ತು ಶಿವು ಅವರಿಗೆ. ಆದರೆ ಎತ್ತ ಹೋಗಬೇಕೆಂದು ತಿಳಿಯದೇ ಜೀವ ಉಳಿಸಿಕೊಳ್ಳಬೇಕೆಂದು ತಂದೆ ಮತ್ತು ತಾಯಿ ಇಬ್ಬರೂ ಮಕ್ಕಳ ಕೈಹಿಡಿದುಕೊಂಡು ಕಾರಿನಿಂದ ಇಳಿದು ಓಡುತ್ತಿದ್ದಾರೆ. ಇವರಷ್ಟೇ ಅಲ್ಲ, ಅಲ್ಲಿದ್ದ ಎಲ್ಲರೂ ಓಡುತ್ತಿದ್ದಾರೆ.

ಜನರ ಚೀರಾಟ, ಕೂಗಾಟ ಆಕ್ರಂದನ ಮುಗಿಲು ಮುಟ್ಟಿದೆ. ಕೆಲವರು ಕಾಲ್ತುಳಿತಕ್ಕೆ ಸಿಕ್ಕಿಹಾಕಿಕೊಂಡು ತತ್ತರಿಸಿ ಹೋಗಿದ್ದಾರೆ. ಅಲ್ಲಿ ಏನಾಗುತ್ತಿದೆ ಎಂದು ಯಾರಿಗೂ ತಿಳಿದಿಲ್ಲ. ಸಾನ್ವಿ ಮತ್ತು ಶಿವು ಅವರು ತಂದೆ ತಾಯಿಯೊಂದಿಗೆ ಓಡಿ ಹೋಗಿ ಹತ್ತಿರದಲ್ಲಿದ್ದ ಮೆಟ್ರೋ ರೈಲು ನಿಲ್ದಾಣ ಏರಿದರು. ಮೇಲೆ ನಿಂತು ಭಯ ಮತ್ತು ಕಾತುರತೆಯಿಂದ ಅಲ್ಲೇನಾಗುತ್ತಿದೆ ಎಂದು ನೋಡುತ್ತಿದ್ದರೆ. ಬೃಹತ್ ಗಾತ್ರದ ಡೈನೋಸಾರ್‌ಗಳು ಅಲ್ಲಿದ್ದ ಜನರನ್ನು ಹಾಗೂ ವಾಹನಗಳನ್ನು ಮನಸ್ಸಿಗೆ ಬಂದಂತೆ ಎತ್ತಿ ಬಿಸಾಕುತ್ತಿವೆ. ಕೈಗೆ ಸಿಕ್ಕ ಮಾನವರನ್ನೆಲ್ಲಾ ಬಾಳೆಹಣ್ಣು ನುಂಗುವಂತೆ ನುಂಗುತ್ತಿವೆ. ಸಾನ್ವಿ ಮತ್ತು ಶಿವು ಈ ದೃಶ್ಯವನ್ನು ಅಚ್ಚರಿಯಿಂದ ನೋಡುತ್ತಿದ್ದಾರೆ. ಇದು ಯಾವುದೋ ಹಾರರ್ ಅಥವಾ ಹಾಲಿವುಡ್ ಸಿನಿಮಾದ ದೃಶ್ಯವಲ್ಲ. ಒಂದು ವೇಳೆ ಪೆಡಂಭೂತಗಳು ಬದುಕಿದ್ದರೆ ಏನಾಗುತ್ತಿತ್ತು ಎಂಬುದರ ಕಲ್ಪನೆ ಮಾತ್ರ. ಹೌದು ಇಂತದ್ದೊಂದು ಪ್ರಶ್ನೆ ಕಾಡದೇ ಇರದು. ಪೆಡಂಭೂತಗಳು ಇಂದಿಗೂ ಜೀವಂತವಾಗಿದ್ದರೆ ಏನಾಗುತ್ತಿತ್ತು!.

ಭೂ ಚರಿತ್ರೆಯಲ್ಲಿ ಸುಮಾರು 6.5 ಕೋಟಿ ವರ್ಷಗಳ ಹಿಂದೆ ಬದುಕಿದ್ದ ಪೆಡಂಭೂತಗಳ ಕಾಲ ವಿಶಿಷ್ಟವಾದದ್ದು. ಡೈನೋಸಾರ್ ಎಂದು ಕರೆಯಲ್ಪಡುತ್ತಿದ್ದ ಪೆಡಂಭೂತಗಳು ಕೋಳಿಯ ಗಾತ್ರದಿಂದ ಬೃಹತ್ ತಿಮಿಂಗಲಗಳನ್ನು ಮೀರಿಸುವಂತಹ ಗಾತ್ರದವರೆಗೂ ವೈಶಿಷ್ಟತೆಯನ್ನು ಪಡೆದಿದ್ದವು. ಕೆಲವು ಸಸ್ಯಹಾರಿಗಳಾಗಿ ಮತ್ತೆ ಕೆಲವು ಮಾಂಸಾಹಾರಿಗಳಾಗಿದ್ದವು. ಕೆಲವು ಡೈನೋಸಾರ್‌ಗಳು ಎರಡು ಪಾದಗಳನ್ನು ಹೊಂದಿದ್ದರೆ, ಕೆಲವು ಡೈನೋಸಾರ್ ಚತುಷ್ಪಾದಿಯಾಗಿದ್ದವು. ಕೆಲವು ಡೈನೋಸಾರ್‌ಗಳು 30 ಆನೆಗಳ ತೂಕ ಹೊಂದಿದ್ದು, 6 ಮೀಟರ್‌ಗಿಂತ ಹೆಚ್ಚು ಎತ್ತರವಾಗಿದ್ದವು. 15 ಸೆಂಟಿಮೀಟರ್ ಗರಗಸದಂತಹ ಹಲ್ಲುಗಳನ್ನು ಹೊಂದಿದ್ದ ಮಾಂಸಹಾರಿ ಡೈನೋಸಾರ್‌ಗಳು ಎಲ್ಲಾ ಜೀವಿಗಳನ್ನು ತಿಂದು ಹಾಕುತಿದ್ದವು. ಅಮೇರಿಕಾದ ಕೊಲರಾಡೋ ಪ್ರಾಂತದಲ್ಲಿ, ಗೋಬಿ ಮರುಭೂಮಿಯಲ್ಲಿ ಪೆಡಂಭೂತಗಳ ಕುರುಹುಗಳು ದೊರೆತಿವೆ. ಅಷ್ಟೇ ಅಲ್ಲದೇ ನಮ್ಮ ದೇಶದ ಗುಜರಾತಿನ ಅನೇಕ ಭಾಗಗಳಲ್ಲಿ, ಮಧ್ಯಪ್ರದೇಶ ಮತ್ತು ಗೋದಾವರಿ ಕಣಿವೆಗಳಲ್ಲಿ ಪೆಡಂಭೂತಗಳ ಅವಶೇಷಗಳು ಕಂಡು ಬಂದಿವೆ. ಭೂ ಇತಿಹಾಸದಲ್ಲಿ ನೆಲ–ಜಲ ಬಾನಿನಲ್ಲಿ ಸಾಮ್ರಾಜ್ಯವನ್ನು ಸ್ಥಾಪಿಸಿ ಆರುವರೆ ಕೋಟಿ ವರ್ಷಗಳ ಹಿಂದೆ ಸಂಪೂರ್ಣವಾಗಿ ಮರೆಯಾಗಿ ಹೋದವು. ಇವುಗಳ ಸಾಮೂಹಿಕ ನಿರ್ಗಮನಕ್ಕೆ ವಿಜ್ಞಾನಿಗಳು ಅನೇಕ ಕಾರಣಗಳನ್ನು ನೀಡಿದ್ದಾರೆ. ಅವುಗಳ ನಿರ್ಮಾಮಕ್ಕೆ ನಿಖರ ಕಾರಣ ಇನ್ನೂ ನಿಗೂಢವಾಗಿಯೇ ಇದೆ. ಆದಾಗ್ಯೂ ಇಂತಹ ಬೃಹತ್ ಜೀವಿಗಳು ಇಂದಿಗೂ ಜೀವಂತವಾಗಿದ್ದರೆ ಏನಾಗುತ್ತಿತ್ತು? ಊಹಿಸಿದರೆ ಉತ್ತರ ನಮ್ಮನ್ನು ತತ್ತರಿಸುವಂತೆ ಮಾಡುತ್ತದೆ.



ಆರ್.ಬಿ.ಗುರುಬಸವರಾಜ
ಶಿಕ್ಷಕರು, ಹ.ಬೊ.ಹಳ್ಳಿ

Scan For Digital Colourful
HAMPI TIMES E-paper

ನಾವೆಲ್ಲ ಡೈನೋಸಾರ್‌ಗಳನ್ನು ಕಾಲ್ಪನಿಕ ಸಿನಿಮಾ ಅಥವಾ ವಸ್ತು ಸಂಗ್ರಹಾಲಯದಲ್ಲಿನ ಪಳೆಯುಳಿಕೆಗಳಿಂದ ಅವುಗಳ ಗಾತ್ರವನ್ನು ಊಹಿಸಿಕೊಂಡಿದ್ದೇವೆ. ಪುಸ್ತಕಗಳಲ್ಲಿ ಅವುಗಳ ಬಗ್ಗೆ ಮಾಹಿತಿ ತಿಳಿದುಕೊಂಡಿದ್ದೇವೆ. ಒಂದು ವೇಳೆ ಅವು ಬದುಕಿದ್ದರೆ ಜೀವಂತವಾಗಿ ಅವುಗಳನ್ನು ನೋಡಬಹುದಿತ್ತು. ಅವುಗಳ ಕುರಿತ ಇನ್ನಷ್ಟು ಅಧ್ಯಯನ ಮಾಡಬಹುದಿತ್ತು. ಜೀವಜಗತ್ತಿನ ಇನ್ನಷ್ಟು ರಹಸ್ಯಗಳನ್ನು ತಿಳಯಬಹುದಿತ್ತು. ಡೈನೋಸಾರ್ ಬದುಕಿದ್ದರೆ ಜುರಾಸಿಕ್ ಪಾರ್ಕ್ ಮತ್ತು ಜುರಾಸಿಕ್ ವರ್ಲ್ಡ್‌ನಂತಹ ಸಿನಿಮಾ ನೋಡುವ ಅಗತ್ಯವಿರಲಿಲ್ಲ. ಎಲ್ಲವನ್ನೂ ನೈಜವಾಗಿಯೇ ಬನ್ನೇರುಘಟ್ಟ ಅಥವಾ ನಾಗರಹೊಳೆ ಅಭಯಾರಣ್ಯದಲ್ಲಿ ಪ್ರಾಣಿಗಳನ್ನುನೋಡುವಂತೆಡೈನೋಸಾರ್‌ಗಳನ್ನುನೋಡಬಹುದಿತ್ತು. ಕಾಂಗರೂ, ಆನೆ, ಹುಲಿ, ಸಿಂಹ, ಕರಡಿ, ರಣಹದ್ದುಗಳು ವಿವಿಧ ದೇಶಗಳ ರಾಷ್ಟ್ರೀಯ ಪ್ರಾಣಿಯಾದಂತೆ ಡೈನೋಸಾರ್‌ಗಳು ಯಾವುದಾದರೂ ಒಂದು ದೇಶದ ರಾಷ್ಟ್ರೀಯ ಪ್ರಾಣಿಯಾಗಿರುತ್ತಿತ್ತು.

## ಏನಾಗುತ್ತೆ ಗುರು?

ಬಹುತೇಕ ಡೈನೋಸಾರ್‌ಗಳು ಮಾಂಸಹಾರಿಗಳು. ಅವು ಭೂಮಿಯ ಮೇಲಿನ ಎಲ್ಲಾ ಪ್ರಾಣಿಗಳನ್ನು ಆಹಾರಕ್ಕಾಗಿ ತಿಂದು ಹಾಕುತ್ತಿದ್ದವು. ಆಗ ನಮಗೆ ಕೋಳಿ, ಕುರಿ, ಹಂದಿ ಅಥವಾ ಇನ್ನಿತರೇ ಪ್ರಾಣಿಗಳು ಆಹಾರಕ್ಕಾಗಿ ಸಿಗುತ್ತಿರಲಿಲ್ಲ. ಡೈನೋಸಾರ್‌ಗಳು ಬದುಕಿದ್ದರೆನಾವುಯಾವುದೇಪ್ರಾಣಿಗಳನ್ನುಭೇಟೆಯಾಡುವುದಾಗಲೀ, ಕೊಲ್ಲುವುದಾಗಲೀ ಸಾಧ್ಯವಿರಲಿಲ್ಲ. ಆಗ ನಾವು ಮಾಂಸಹಾರಕ್ಕಾಗಿ ಕೇವಲ ಮೀನು ಮತ್ತು ಇನ್ನಿತರೇ ಜಲಚರಗಳನ್ನು ಅವಲಂಬಿಸಬೇಕಾಗುತ್ತಿತ್ತು.

ಡೈನೋಸಾರ್‌ಗಳು ಬದುಕಿದ್ದರೆ ಪ್ರತಿಕ್ಷಣವೂ ನಾವು ಎಚ್ಚರಿಕೆಯಿಂದ ಜೀವನ ನಿರ್ವಹಣೆ ಮಾಡಬೇಕಾಗುತ್ತಿತ್ತು. ಈಗಿನಂತೆ ಅಂಗಡಿ, ಮಾರ್ಕೆಟ್‌ಗೆ ಹೋಗಿ ಬೇಕಾದ ಸಾಮಾನು ನಿರ್ಭಯವಾಗಿ ತರುವುದಾಗಲೀ, ನಿರ್ಭಯವಾಗಿ ಸಿನಿಮಾ ನೋಡುವುದಾಗಲೀ, ತಿರುಗಾಡುವುದಾಗಲೀ ಸಾಧ್ಯವಾಗುತ್ತಿರಲಿಲ್ಲ. ಏಕೆಂದರೆ ಅವು ಯಾವುದೇ ಕ್ಷಣದಲ್ಲಿ ನಮ್ಮ ಮೇಲೆ ದಾಳಿ ಮಾಡಬಹುದು ಎಂಬ ಭಯ ಸದಾ ಕಾಡುತ್ತಲೇ ಇರುತ್ತಿತ್ತು. ವಯಸ್ಸಾದವರು ವಾಕಿಂಗ್ ಮಾಡಲು ಹೆದರಬೇಕಾಗುತ್ತಿತ್ತು. ಮಕ್ಕಳು ಆಟವಾಡಲು ಹೊರಗೆ ಬಾರದಂತೆ ಒಳಗೆ ಕೂರಬೇಕಿತ್ತು. ಕತ್ತಲನ್ನು ಓಡಿಸಲು ಕೈಯಲ್ಲಿ ಟಾರ್ಚ್ ಹಿಡಿದು ಓಡಾಡುವಂತೆ ರಕ್ಷಣೆಗಾಗಿ ಸದಾ ಜೇಬಿನಲ್ಲಿ ಪಿಸ್ತೂಲು ಇಟ್ಟುಕೊಂಡು ತಿರುಗಾಡಬೇಕಿತ್ತು.

ಡೈನೋಸಾರ್‌ಗಳು ಇಂದು ಬದುಕಿದ್ದರೆ ನಿಸ್ಸಂದೇಹವಾಗಿ ಗಂಭೀರವಾದ ಹಾನಿಯನ್ನುಂಟು ಮಾಡುತ್ತಿದ್ದವು. ಅವುಗಳ ಭಾರೀ ಗಾತ್ರಕ್ಕೆ ಭೂಮಿ ಅಲ್ಲಾಡಿ ಅಲ್ಲಾಡಿ ಅಲ್ಲಲ್ಲಿ ಬಿರುಕುಗಳು ಉಂಟಾಗುತ್ತಿದ್ದವು. ವಿದ್ಯುತ್ ಕಂಬಗಳನ್ನು ಬಾಲದಿಂದಲೇ ಬೀಳಿಸಿ ಹಾಕುತ್ತಿದ್ದವು. ವಿದ್ಯುತ್ ತಂತಿಗಳು ಪರಸ್ಪರ ತಾಕಿಕೊಂಡು ವಿದ್ಯುತ್ ಸರ್ಕಿಟ್‌ನಿಂದ ಸಾಕಷ್ಟು ಜೀವ ಹಾಗೂ ಪರಿಸರ ಹಾನಿಯಾಗುತ್ತಿತ್ತು. ಡೈನೋಸಾರ್‌ಗಳು ಬದುಕಿದ್ದರೆ ಪರಿಸರದಲ್ಲಿ ಅವ್ಯವಸ್ಥೆ ಉಂಟಾಗುತ್ತಿತ್ತು. ಪ್ರಾಣಿಗಳಿಗೆ ಇದ್ದ ರೋಗರುಜಿನಗಳು ಡೈನೋಸಾರ್‌ಗಳಿಗೂ ಹರಡುತ್ತಿದ್ದವು ಅಥವಾ ಡೈನೋಸಾರ್‌ಗಳ ರೋಗಗಳು ಇನ್ನಿತರೇ ಜೀವಿಗಳಿಗೆ ತಗಲುವ ಭಯ ಇರುತ್ತಿತ್ತು.


ವಿಜ್ಞಾನಿಗಳ ಅಭಿಪ್ರಾಯದಂತೆ ಭೂಮಿಯ ಮೇಲಿನ ಅತ್ಯಂತ ಬುದ್ದಿವಂತ ಡೈನೋಸಾರ್ ಎಂದರೆ ಟ್ರೂಡಾನ್. ಅದರ ಮೆದುಳು ದೇಹದ ತೂಕಕ್ಕೆ ಅನುಪಾತದಲ್ಲಿತ್ತು. ಇತರೆ ಡೈನೋಸಾರ್‌ಗಳ ಮೆದುಳು ಅವುಗಳ ದೇಹದ ಅನುಪಾತಕ್ಕಿಂತ ತೀರಾ ಚಿಕ್ಕದಾಗಿತ್ತು. ಟ್ರೂಡಾನ್‌ನ ಬುದ್ದಮತ್ತೆ ಇಂದು ವಿಕಾಸಗೊಳ್ಳಲು ಅವಕಾಶ ಇದ್ದರೆ ಅದು ನಮ್ಮ ರಾಜಕೀಯ, ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಆರೋಗ್ಯ ಕ್ಷೇತ್ರಗಳಲ್ಲು ಉನ್ನತ ಸ್ಥಾನ ಗಳಿಸುತ್ತಿತ್ತು. ಬುದ್ದಿಮತ್ತೆಯಲ್ಲಿ ಪ್ರಾಬಲ್ಯ ಇದ್ದುದರಿಂದ ಅದು ನಮ್ಮ ಜನನಾಯಕ ಆಗಬಹುದಿತ್ತು.

ಕಾಗೆ ಹಾರಿಬಂದು ರೊಟ್ಟಿಯ ಚೂರನ್ನು ಕಚ್ಚಿ ಒಯ್ಯುವಂತೆ ಕೆಲವು ಡೈನೋಸಾರ್‌ಗಳು ಹಾರಿಬಂದು ನಮ್ಮನ್ನೆಲ್ಲಾ ಎತ್ತಿಕೊಂಡು ಹೋಗಿ ನುಂಗುತ್ತಿದ್ದವು. ಬಹುತೇಕ ಭೂಮಿಯ ಮೇಲಿನ ಮಾನವರೆಲ್ಲಾಒಂದಲ್ಲಒಂದುಡೈನೋಸಾರ್‌ಗೆಆಹಾರವಾಗುತ್ತಿದ್ದರು. ಇಂದು ಪ್ರಪಂಚದ ಜನಸಂಖ್ಯೆ 776 ಕೋಟಿ ಹಾಗೂ ಭಾರತದ ಜನಸಂಖ್ಯೆ 137 ಕೋಟಿಯನ್ನು ದಾಟುತ್ತಿದೆ. ಡೈನೋಸಾರ್‌ಗಳು ಬದುಕಿದ್ದರೆ ಭೂಮಿಯ ಮೇಲೆ ಮಾನವರ ಜನಸಂಖ್ಯೆ ತೀರಾ ಇಳಿಮುಖವಾಗುತ್ತಿತ್ತು. ಮಾನವರ ಸಂಖ್ಯೆ ಮಾತ್ರವಲ್ಲ ಪ್ರಾಣಿಗಳು ಹಾಗೂ ಸಸ್ಯಗಳ ಸಂಖ್ಯೆಯೂ ಕಡಿಮೆಯಾಗುತ್ತಿತ್ತು.

ಒಂದುವೇಳೆ ಡೈನೋಸಾರ್ ಬದುಕಿದ್ದರೆ ಆನೆಗಳನ್ನು ಪಳಗಿಸಿದಂತೆ ವಿಶೇಷ ತಂತ್ರಗಾರಿಕೆಯಿಂದ ಸಾಕುಪ್ರಾಣಿಗಳನ್ನಾಗಿ ಮಾಡಿಕೊಂಡು, ಜೆ.ಸಿ.ಬಿ, ಕ್ರೇನ್‌ಗಳು ಮಾಡುವ ಬೃಹತ್ ಕಾರ್ಯಗಳನ್ನು ಮಾಡಿಸಿಕೊಳ್ಳಬಹುದಾಗಿತ್ತು. ಭಾರೀ ಸಾಧನ ಸಲಕರಣೆಗಳನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸುಲಭವಾಗಿ ಸಾಗಿಸಬಹುದಿತ್ತು. ಕಾರ್ಖಾನೆಗಳಲ್ಲೂ ಅವುಗಳನ್ನು ಬಳಸಿಕೊಳ್ಳಬಹುದಿತ್ತು. ಅವುಗಳು ವಿಪರೀತ ಹಾವಳಿ ಮಾಡದಂತೆ ಚುಚ್ಚುಮದ್ದು ನೀಡಿ ನಾಯಿ, ಬೆಕ್ಕು, ಹಸುಗಳಂತೆ ಸಾಕಿಕೊಳ್ಳಬಹುದಿತ್ತೇ!?

# ದೃಷ್ಟಿಗೆ ತಕ್ಕ ಸೃಷ್ಟಿ

■ ಪ್ರಜ್ಞಾ ರವೀಶ್ ಕುಳಮರ್ವ ಕಾಸರಗೋಡು



"ಯದ್ಭಾವಂ ತದ್ಭವತಿ" ಎಂಬಂತೆ ಅವರವರ ಭಾವಕ್ಕೆ ಅವರವರ ಭಕುತಿಗೆ ತಕ್ಕಂತೆ ದೇವರು ಗೋಚರಿಸುತ್ತಾರೆ. ದೇವರ ಸೃಷ್ಟಿಯು ನಮ್ಮ ದೃಷ್ಟಿಯಂತೆ ಗೋಚರಿಸುತ್ತದೆ. ನಾವು ನೋಡುವ ದೃಷ್ಟಿಯು ಚೆನ್ನಾಗಿದ್ದರೆ ದೇವರ ಸೃಷ್ಟಿಯು ಚೆನ್ನಾಗಿಯೇ ಕಾಣುತ್ತದೆ, ನಾವು ನೋಡುವ ದೃಷ್ಟಿ ಕೆಟ್ಟದಿದ್ದರೆ ದೇವರ ಸೃಷ್ಟಿಯೂ ಕೆಟ್ಟದಾಗಿ ಕಾಣುತ್ತದೆ.

ಒಮ್ಮೆ ಶ್ರೀಕೃಷ್ಣ ಪರಮಾತ್ಮನು, ಧರ್ಮರಾಯ ಹಾಗೂ ದುರ್ಯೋಧನರಲ್ಲಿ ಪ್ರಪಂಚ ಪರ್ಯಟನೆ ಮಾಡಲು ಹೇಳಿ, ಪ್ರಪಂಚದಲ್ಲಿ ಏನೆಲ್ಲ ನಡೆಯುತ್ತಿದೆ ಎಂಬುದನ್ನು ನನಗೆ ಬಂದು ತಿಳಿಸಬೇಕು ಎಂದನಂತೆ. ಶ್ರೀಕೃಷ್ಣ ಪರಮಾತ್ಮನ ಮಾತಿನಂತೆ ಇಬ್ಬರೂ ಪ್ರಪಂಚ ಪರ್ಯಟನೆ ಮಾಡಿ ಶ್ರೀಕೃಷ್ಣನ ಕಡೆಗೆ ಮರಳಿದರಂತೆ. ಏಕಾಂತದಲ್ಲಿದ್ದ ಶ್ರೀಕೃಷ್ಣನು ಮೊದಲಿಗೆ ದುರ್ಯೋಧನನ ಬಳಿ ಪ್ರಪಂಚದಲ್ಲಿ ಏನೆಲ್ಲಾ ನಡೆಯುತ್ತಿದೆ ಎಂದು ಮಾಹಿತಿ ಕೇಳಿದಾಗ ದುರ್ಯೋಧನನು, "ಪ್ರಪಂಚದಲ್ಲಿ ಕೊಲೆ, ಸುಲಿಗೆ, ಅನ್ಯಾಯ, ಅಕ್ರಮ, ಹಿಂಸೆ, ಅತ್ಯಾಚಾರಗಳು ತಾಂಡವವಾಡುತ್ತಿದೆ, ಎತ್ತ ನೋಡಿದರೂ ಉತ್ತಮರು ಕಾಣಸಿಗುವುದಿಲ್ಲ, ಪ್ರಪಂಚದಾದ್ಯಂತ ಕೆಟ್ಟ ಜನರೇ ತುಂಬಿರುವರು" ಎಂದನಂತೆ.

ಶ್ರೀಕೃಷ್ಣನು ಧರ್ಮರಾಯನ ಬಳಿ ಪ್ರಪಂಚ ಪರ್ಯಟನೆಯ ವಿವರ ಕೇಳಲು ಧರ್ಮರಾಯನು, "ಪ್ರಪಂಚ ಸುಭೀಕ್ಷ ವಾಗಿದೆ, ಜನರೆಲ್ಲಾ ಉತ್ತಮ ಸಂಸ್ಕೃತಿ, ಸಂಪ್ರದಾಯಗಳನ್ನು ಹೊಂದಿ ಸಭ್ಯತೆಯನ್ನು ಉಳ್ಳವರಾಗಿದ್ದಾರೆ, ಮನೆ, ಮಠ, ದೇವಸ್ಥಾನಗಳಲ್ಲಿ ದೇವತಾ ಕಾರ್ಯಗಳು ನೆರವೇರುತ್ತಿದೆ" ಎಂದನಂತೆ. ಹೀಗೆ ನಮ್ಮ ಯೋಚನಾ ಲಹರಿಯಂತೆ, ನಾವು ನೋಡುವ ದೃಷ್ಟಿಕೋನದಂತೆ ನಮಗೆ ದೈವ ಸೃಷ್ಟಿಯು ಗೋಚರಿಸುತ್ತದೆ.

"ನಮ್ಮ ಕಣ್ಣು ಸುಂದರವಾಗಿದ್ದರೆ ಇಡೀ ಜಗತ್ತೇ ನಮಗೆ ಸುಂದರವಾಗಿ ಕಾಣುತ್ತದೆ, ನಮ್ಮ ಮನಸ್ಸು ಸುಂದರವಾಗಿದ್ದರೆ ಇಡೀ ಜಗತ್ತಿಗೆ ನಾವು ಸುಂದರವಾಗಿ ಕಾಣುತ್ತೇವೆ" ಎಂಬ ಮಾತಿನಂತೆ ಒಳ್ಳೆಯದು, ಕೆಟ್ಟದ್ದು ಎಂಬುದು ನಮ್ಮ ಚಿಂತನೆಯಲ್ಲಿಯೇ ಇರುತ್ತದೆ.

ಮನದಲ್ಲಿ ಸದ್ವಿಚಾರ, ಸದ್ಚಿಂತನೆ ತುಂಬಿದ್ದರೆ ಎಲ್ಲವೂ ನಮಗೆ ಚೆನ್ನಾಗಿಯೇ ಕಾಣಿಸುತ್ತವೆ ಹಾಗೆಯೇ ಮನದಲ್ಲಿ ಕೆಟ್ಟ ಆಲೋಚನೆಗಳೇ ತುಂಬಿದ್ದರೆ ಎಲ್ಲವೂ ನಮಗೆ ಕೆಟ್ಟದರಂತೆ ಕಾಣಿಸುತ್ತದೆ. ಕಣ್ಣು ಎಂಬುದು ಮನಸ್ಸಿನ ಕಿಟಕಿಯಿದ್ದಂತೆ. ನಾವು ಬಾಹ್ಯ ಪ್ರಪಂಚವನ್ನು ಕಣ್ಣಿನಿಂದ ನೋಡುತ್ತೇವೆಯಾದರೂ ನೋಡುವ ದೃಷ್ಟಿಯು ಮನಸ್ಸೆಂಬ ಒಳಗಣ್ಣಿನಲ್ಲಿ ಅಡಗಿರುತ್ತದೆ. ನಾವು ನೋಡುವ ದೃಷ್ಟಿ ಚೆನ್ನಾಗಿದ್ದರೆ ಕೆಡುಕಿನಲ್ಲಿಯೂ ಒಳಿತನ್ನೇ ಕಾಣಲು ಸಾಧ್ಯ ಆದರೆ ನಾವು ನೋಡುವ ದೃಷ್ಟಿಯೇ ಕೆಟ್ಟದಿದ್ದರೆ ಒಳಿತು ಕೂಡ ಕೆಡುಕಾಗಿ ಕಂಡೀತು! ಮೊಸರಿನಲ್ಲಿಯೂ ಕಲ್ಲು ಹುಡುಕುವವರಂತೆ!

ಶ್ರೀರಾಮ, ಧರ್ಮರಾಯರು ಸದ್ಚಿಂತನೆ, ಸದ್ವಿಚಾರಗಳಿಂದಲೇ ಆದರ್ಶ ವ್ಯಕ್ತಿಗಳಾಗಿ ಬದುಕಿ ತೋರಿಸಿದವರು. ಅವರಿತ್ತ ಆದರ್ಶ ಯುಗಯುಗಕ್ಕೂ ಅನ್ವಯಿಸುವಂಥದ್ದು. ಸದ್ಚಿಂತನೆ, ಸದ್ವಿಚಾರಗಳಿಂದ ಮಾನವ ದೇವರಾಗಬಲ್ಲ ಎಂಬುದನ್ನು ಶ್ರೀರಾಮನ ಬದುಕಿನುದ್ದಕ್ಕೂ ನಾವು ನೋಡಬಹುದು.

ರಾವಣ, ದುರ್ಯೋಧನರಂಥವರಿಗೆ ಒಳಿತು ಕೂಡ ಕೆಡುಕಾಗಿಯೇ ಕಾಣುತ್ತದೆ. ಇಡೀ ಲೋಕ ಸುತ್ತಿದರೂ ರಾಮ ಹಾಗೂ ಧರ್ಮರಾಯರಿಗೆ ಕೆಟ್ಟ ವ್ಯಕ್ತಿಗಳು ಕಾಣಸಿಗಲಿಲ್ಲವಂತೆ ಹಾಗೆಯೇ ಇಡೀ ಲೋಕ ಸುತ್ತಿದರೂ ರಾವಣ ಹಾಗೂ ದುರ್ಯೋಧನರಿಗೆ ಒಳ್ಳೆಯವರು ಕಾಣಸಿಗಲಿಲ್ಲವಂತೆ! ಇದೇ ಉದಾಹರಣೆ ಸಾಕಲ್ಲವೇ ನಮ್ಮ ದೃಷ್ಟಿಯಂತೆ ಈ ಸೃಷ್ಟಿ ಇರುತ್ತದೆಯೇ ಹೊರತು ಇನ್ನ್ಯಾವುದರಿಂದಲೂ ಅಲ್ಲ ಎಂದು ಅರಿಯಲು?!

ನಮ್ಮ ಮನಸ್ಸಿನ ಯೋಚನೆಗಳೇ ನಮ್ಮ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿ. ಬೆಳೆದ ಪರಿಸರ ಹಾಗೂ ಸ್ನೇಹಿತರಿಂದ ಒಬ್ಬ ವ್ಯಕ್ತಿಯ ವ್ಯಕ್ತಿತ್ವವನ್ನು ಅಳೆಯಬಹುದು ಎಂಬ ಮಾತಿದೆ ಹಾಗಾಗಿ " ಸಜ್ಜನರ ಸಂಗವದು ಹೆಜ್ಜೇನು ಸವಿದಂತೆ" ಎಂಬ ನುಡಿಯಂತೆ ಉತ್ತಮರ ಸಂಗದಿಂದ ನಾವು ಉತ್ತಮ ವ್ಯಕ್ತಿಗಳಾಗಲು ಸಾಧ್ಯ. ಸದ್ಚಿಂತನೆ, ಸದ್ವಿಚಾರಗಳು ಮಾನವನನ್ನೂ ದೇವರನ್ನಾಗಿ ಮಾಡಬಲ್ಲದು ಎಂಬುದಕ್ಕೆ ಆದರ್ಶ ಪುರುಷ ಶ್ರೀ ರಾಮನ ವ್ಯಕ್ತಿತ್ವವೇ ಸಾಕ್ಷಿ. ದುರಾಲೋಚನೆ, ದುರ್ವಿಚಾರಗಳು ಮಾನವನನ್ನು ದಾನವನ ನ್ನಾಗಿ ಮಾಡಬಲ್ಲದು ಎಂಬುದಕ್ಕೆ ರಾವಣ, ದುರ್ಯೋಧನರಂಥವರೇ ಸಾಕ್ಷಿ.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

## ಕವಿ ಮನಸು

### ಕಾಡುತ್ತಾಳೆ ..!!!



ಕಾಡುತ್ತಿದ್ದಾಳೆ
ಅವಳು
ಹಗಲಿರುಳು
ಬೆನ್ನು ಬಿಡದೇ
ಬಿಸಿಯುಂಡೆಯಂತಹ
ಮೈರೂಪ
ಸೂಜಿ ಔಷಧಿಗಳಿಗೂ
ಬೆದರುತ್ತಿಲ್ಲ
ಅವಳ
ಬಹುರೂಪ;
ಆಗಾಗ ತೋರುತ್ತಾಳೆ
ಕೆಂಡದಂತ
ತಾಪ;
ಅಜಾನುಭಾವು ಅವನು
ಒಣಗಿದ ಮರದಂತೆ
ಹಾಸಿಗೆಯಲ್ಲೇ
ಮಲಗಿ
ಚಡಪಡಿಸುತ್ತಿದ್ದಾನೆ;
ಜ್ವರವೆಂಬ
ಮಾಯೆಯಿಂದ
ತಪ್ಪಿಸಿಕೊಳ್ಳಲು..!!

– ಕಾಡಜ್ಜಿ ಮಂಜುನಾಥ

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಸ್ಥಳೀಯ ಸುದ್ದಿಗಳಿಗಾಗಿ ಭೇಟಿ ನೀಡಿ
www.hampitimes.com
epaper.hampitimes.com

# ವಚನ ಚಳವಳಿ ಬಹುದೊಡ್ಡ ಸಾಂಸ್ಕೃತಿಕ ಚಳವಳಿ

## ಕನ್ನಡ ವಿಶ್ವವಿದ್ಯಾಲಯದ ಕುಲಪತಿ ಡಾ.ಡಿ.ವಿ.ಪರಮಶಿವಮೂರ್ತಿ ಹೇಳಿಕೆ | ರಾಜ್ಯಮಟ್ಟದ ವಿಚಾರ ಸಂಕಿರಣ

**ಹಂಪಿ ಟೈಮ್ಸ್ ಹೊಸಪೇಟೆ**

ವಚನ ಚಳವಳಿ 12ನೇ ಶತಮಾನದಲ್ಲಿ ಕನ್ನಡನಾಡಿನಲ್ಲಿ ನಡೆದ ಬಹುದೊಡ್ಡ ಜನಸಂಸ್ಕೃತಿಯನ್ನು ಜನರ ಭಾವನೆಗಳ ಮೂಲಕ ಕನ್ನಡದಲ್ಲಿ ಅನಾವರಣಗೊಳಿಸಿದ ಬಹುದೊಡ್ಡ ಸಾಂಸ್ಕೃತಿಕ ಚಳವಳಿ ಎಂದು ಕನ್ನಡ ವಿಶ್ವವಿದ್ಯಾಲಯದ ಕುಲಪತಿ ಡಾ.ಡಿ.ವಿ.ಪರಮಶಿವಮೂರ್ತಿ ಹೇಳಿದರು.

ನಗರದ ವಿಜಯನಗರ ಕಾಲೇಜಿನ ಸುವರ್ಣ ಭವನದಲ್ಲಿ ಗುರುವಾರ ಕನ್ನಡ ವಿಶ್ವವಿದ್ಯಾಲಯದ ದಲಿತ ಸಂಸ್ಕೃತಿ ಅಧ್ಯಯನ ಪೀಠವು ವಿಜಯನಗರ ಮಹಾವಿದ್ಯಾಲಯದ ಇತಿಹಾಸ ವಿಭಾಗದ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ವಚನ ಚಳವಳಿ : ಸಮಕಾಲೀನ ಸಂದರ್ಭದ ಜೊತೆ ಮುಖಾಮುಖಿ ಎಂಬ ವಿಷಯ ಕುರಿತ ಒಂದು ದಿನದ ರಾಜ್ಯಮಟ್ಟದ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಮಾತನಾಡಿದರು.

ದಲಿತ ಸಂಸ್ಕೃತಿ ಅಧ್ಯಯನ ಪೀಠದ ಸಂಚಾಲಕರಾದ ಪ್ರೊ.ಎನ್.ಚಿನ್ನಸ್ವಾಮಿ ಸೋಸಲೆ ಪ್ರಾಸ್ತಾವಿಕ ಮಾತನಾಡಿ, ಕ್ರಿ.ಪೂ.6ನೇ ಶತಮಾನದ ಬುದ್ಧ ಪ್ರತಿಪಾದನೆ ಮಾಡಿದ ಆಶಯಗಳು, 12ನೇ ಶತಮಾನದಲ್ಲಿ ಬಸವ ಹಾಗೂ ಬಸವಾದಿ ಶರಣ ಶರಣೆಯರು ಪ್ರತಿಪಾದನೆ ಮಾಡಿದ ಆಶಯಗಳೇ ಬಾಬಾ ಸಾಹೇಬ್ ಅಂಬೇಡ್ಕರ್ ರಚಿಸಿದ ಸಂವಿಧಾನದ ಮೂಲ ಆಶಯಗಳೇ ಆಗಿವೆ ಎಂದರು. ವಚನ ಚಳವಳಿ, ವಚನ ಸಾಹಿತ್ಯ, ಅನುಭವ ಮಂಟಪದ ಮೂಲಕ ಸಂಘಟನಾ ರೂಪವೇ ಸ್ವತಂತ್ರ ಭಾರತ ಕರ್ನಾಟಕದಲ್ಲಿ ಸಂಭವಿಸಿದ ದಲಿತ ಸಾಹಿತ್ಯ, ದಲಿತ ಚಳವಳಿ, ದಲಿತ ಸಂಘಟನೆಗಳಾಗಿ ರೂಪುಗೊಂಡವು ಎಂದು ಹೇಳಿದರು.



ವಿಜಯನಗರ ಮಹಾವಿದ್ಯಾಲಯದ ಅಧ್ಯಕ್ಷ ಮಲ್ಲಿಕಾರ್ಜುನ ಮೇಟಿ ಅಧ್ಯಕ್ಷತೆವಹಿಸಿದ್ದರು. ರಾಜ್ಯೋತ್ಸವ ಪ್ರಶಸ್ತಿ ವಿಜೇತರಾದ ಪ್ರೊ.ಅಲ್ಲಮಪ್ರಭು ಬೆಟ್ಟದೂರು, ಪ್ರಾಂಶುಪಾಲ ಡಾ.ಎಂ.ಪ್ರಭುಗೌಡ, ಸಂಸ್ಥೆಯ ಅಜೀವ ಸದಸ್ಯರಾದ ಡಾ.ಮಹಾಬಲೇಶ್ವರ ರೆಡ್ಡಿ, ಬಸವರಾಜ್ ಮಾವಿನಹಳ್ಳಿ ಭಾಗವಹಿಸಿದ್ದರು.

ಗೋಷ್ಠಿಯಲ್ಲಿ ಬಸವ ಹಾಗೂ ಬಸವಾದಿ ಶರಣರ ಸಿದ್ಧಾಂತಗಳು : ಸಂವಿಧಾನ ಆಶಯಗಳೊಂದಿಗೆ ಮುಖಾಮುಖಿ, ವಿದ್ವತ್ ಪ್ರಬಂಧಗಳು ಮಂಡನೆಯಾದವು. ಇತಿಹಾಸ ವಿಭಾಗದ ಮುಖ್ಯಸ್ಥ ಬಸವರಾಜ ಮೇಟಿ ಸಂಚಾಲಕರಾಗಿ ಕಾರ್ಯನಿರ್ವಹಿಸಿದರು. ಕಾಲೇಜಿನ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಹಾಗೂ ಕಾಲೇಜಿನ ಎಲ್ಲಾ ವಿದ್ಯಾರ್ಥಿಗಳು ಭಾಗವಹಿಸಿದರು.

# ರಸೀದಿ, ಚಲನ್‌ಗಳ ನೈಜತೆ ದೃಢೀಕರಣಗೊಳಿಸಿಕೊಳ್ಳಲು ಸೂಚನೆ

**ಹಂಪಿ ಟೈಮ್ಸ್ ಬಳ್ಳಾರಿ**

ಬಳ್ಳಾರಿ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಸಾರ್ವಜನಿಕರು ಪಾವತಿಸುವ ಆಸ್ತಿ ತೆರಿಗೆ, ನೀರಿನ ತೆರಿಗೆ, ಒಳಚರಂಡಿ ಶುಲ್ಕ, ಎಸ್‌ಡಬ್ಲ್ಯೂಎಂ ಶುಲ್ಕ, ನಮೂನೆ-2 ಶುಲ್ಕ, ಹಕ್ಕು ಬದಲಾವಣೆ ಶುಲ್ಕ, ಉದ್ದಿಮೆ ಪರವಾನಿಗೆ/ನವೀಕರಣ ಶುಲ್ಕ, ಕಟ್ಟಡ ಪರವಾನಿಗೆ ಶುಲ್ಕ, ಜನನ-ಮರಣ ಪ್ರಮಾಣ ಪತ್ರ ಶುಲ್ಕ ಹಾಗೂ ಇತ್ಯಾದಿ ಶುಲ್ಕಗಳನ್ನು ಪಾವತಿಸುವಾಗ ವಲಯ ಅಥವಾ ಪಾಲಿಕೆಯ ನೌಕರರಿಂದ ಪಡೆದ ರಶೀದಿ, ಚಲನ್‌ಗಳ ನೈಜತೆಯನ್ನು 'ಬಳ್ಳಾರಿ ಒನ್' ಮತ್ತು ಮಹಾನಗರ ಪಾಲಿಕೆಯ ಲೆಕ್ಕ ಶಾಖೆಯಿಂದ ದೃಢೀಕರಣಗೊಳಿಸಿಕೊಳ್ಳಬೇಕು ಎಂದು ಬಳ್ಳಾರಿ ಮಹಾನಗರ ಪಾಲಿಕೆಯು ತಿಳಿಸಿದೆ.

ಪಾಲಿಕೆಯ ವ್ಯಾಪ್ತಿಯ ಸಾರ್ವಜನಿಕರು ತಮ್ಮ ಆಸ್ತಿ ತೆರಿಗೆ ಹಾಗೂ ಇನ್ನಿತರೆ ತೆರಿಗೆಯನ್ನು ಸಕಾಲದಲ್ಲಿ ಪಾವತಿಸಿದಲ್ಲಿ ನಗರ ಅಭಿವೃದ್ಧಿಗೆ ಸಹಕಾರಿಯಾಗುತ್ತದೆ ಎಂದು ಪಾಲಿಕೆ ತಿಳಿಸಿದೆ.

# ಕಕರಸಾ ನಿಗಮ: ಡಿ.2 ರಂದು ಫೋನ್ ಇನ್ ಕಾರ್ಯಕ್ರಮ

**ಹಂಪಿ ಟೈಮ್ಸ್ ಬಳ್ಳಾರಿ**

ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ ಬಳ್ಳಾರಿ ವಿಭಾಗದ ವತಿಯಿಂದ ಬಳ್ಳಾರಿ ಭಾಗದ ಸಾರ್ವಜನಿಕ ಪ್ರಯಾಣಿಕರ ಕುಂದು ಕೊರತೆಗಳನ್ನು ಆಲಿಸಲು ಡಿ.02 ರಂದು ಮಧ್ಯಾಹ್ನ 3.30 ಗಂಟೆಯಿಂದ ಸಂಜೆ 4.30 ಗಂಟೆಯವರೆಗೆ "ಫೋನ್ ಇನ್ ಕಾರ್ಯಕ್ರಮ" ಏರ್ಪಡಿಸಲಾಗಿದೆ ಎಂದು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ ಬಳ್ಳಾರಿ ವಿಭಾಗದ ವಿಭಾಗೀಯ ನಿಯಂತ್ರಣಾಧಿಕಾರಿ ಇನಾಯತ್ ಬಾಗ್‌ಬಾನ್ ಅವರು ತಿಳಿಸಿದ್ದಾರೆ.

ಬಳ್ಳಾರಿ ಭಾಗದ ಸಾರ್ವಜನಿಕ ಪ್ರಯಾಣಿಕರ ಬಸ್ ಸೌಕರ್ಯದ ಕುರಿತು ಕುಂದುಕೊರತೆ, ಸಮಸ್ಯೆಗಳಿದ್ದಲ್ಲಿ ಮೊ.7760992152, 6366423885 ಗೆ ಕರೆ ಮಾಡಿ ತಿಳಿಸಬಹುದು. ಬಳ್ಳಾರಿ ವಿಭಾಗದ ವ್ಯಾಪ್ತಿಯಲ್ಲಿ ಪ್ರತಿ ತಿಂಗಳ ಒಂದನೇ ಸೋಮವಾರದಂದು ಬಳ್ಳಾರಿ, ಸಿರುಗುಪ್ಪ, ಕುರುಗೋಡು, ಕಂಪ್ಲಿ ಮತ್ತು ಸಂಡೂರು ತಾಲ್ಲೂಕುಗಳಿಗೆ ಸಂಬಂಧಿಸಿದಂತೆ ಸಾರ್ವಜನಿಕ ಪ್ರಯಾಣಿಕರ ಬಸ್ ಸೌಕರ್ಯದ ಕುರಿತು ಕುಂದು-ಕೊರತೆಗಳನ್ನು ಆಲಿಸಲು 'ಫೋನ್ ಇನ್ ಕಾರ್ಯಕ್ರಮ' ಆಯೋಜಿಸಲಾಗುತ್ತಿದೆ.

ಸಾರ್ವಜನಿಕ ಪ್ರಯಾಣಿಕರ ಬಸ್ ಸೌಕರ್ಯದ ಕುರಿತು ಕುಂದು ಕೊರತೆಗಳಿದ್ದಲ್ಲಿ ಆಲಿಸಿ, ಅಗತ್ಯ ಕ್ರಮ ಕೈಗೊಳ್ಳಲಾಗುವುದು. ಸಾರ್ವಜನಿಕ ಪ್ರಯಾಣಿಕರು "ಫೋನ್ ಇನ್ ಕಾರ್ಯಕ್ರಮ"ವನ್ನು ಸದುಪಯೋಗಪಡೆದುಕೊಳ್ಳಬೇಕು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಭತ್ತ ಕಟಾವಿಗೆ ಪ್ರತಿ ಗಂಟೆಗೆ ರೂ.2,300 ಬಾಡಿಗೆ ನಿಗದಿ

## ಹೆಚ್ಚಿನ ದರ ಪಡೆದರೆ ಕಠಿಣ ಕ್ರಮ: ಡಿಸಿ ಪ್ರಶಾಂತ್ ಕುಮಾರ್ ಮಿಶ್ರಾ ಆದೇಶ

**ಹಂಪಿ ಟೈಮ್ಸ್ ಬಳ್ಳಾರಿ**

ಜಿಲ್ಲೆಯಲ್ಲಿ ಭತ್ತ ಕಟಾವು ಯಂತ್ರಕ್ಕೆ ಪ್ರತಿ ಗಂಟೆಗೆ ಗರಿಷ್ಠ ರೂ.2,300 ಮೀರದಂತೆ ಬಾಡಿಗೆಯನ್ನು ನಿಗದಿಪಡಿಸಲಾಗಿದ್ದು, ಹೆಚ್ಚಿನ ದರ ಪಡೆಯಲು ಮುಂದಾದರೆ ಅಂತಹವರ ವಿರುದ್ಧ ಕಠಿಣ ಕ್ರಮ ಜರುಗಿಸಲಾಗುವುದು ಎಂದು ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ತಿಳಿಸಿದ್ದಾರೆ.



ಪ್ರಸಕ್ತ ಸಾಲಿನ ಮುಂಗಾರು ಹಂಗಾಮಿನಲ್ಲಿ ಜಿಲ್ಲೆಯಲ್ಲಿ 91,225 ಹೆಕ್ಟೇರ್ ಪ್ರದೇಶದಲ್ಲಿ ಭತ್ತದ ಬೆಳೆಯ ಕ್ಷೇತ್ರ ಆವರಿಸಿದ್ದು, ಈಗಾಗಲೇ ಹಲವು ಕಡೆ ಕಟಾವು ಪ್ರಾರಂಭವಾಗಿದೆ. ಜಿಲ್ಲೆಯಲ್ಲಿ ಶೇ.95 ರಷ್ಟು ರೈತರು ಭತ್ತದ ಬೆಳೆಯನ್ನು ಭತ್ತ ಕಟಾವು ಯಂತ್ರಗಳ ಮೂಲಕ ಕಟಾವು ಮಾಡುತ್ತಿದ್ದು, ಪ್ರಸಕ್ತ ಸಾಲಿನಲ್ಲಿ ಬೆಳೆದ ಭತ್ತಕ್ಕೆ ಮಾರುಕಟ್ಟೆಯಲ್ಲಿ ಉತ್ತಮ ಬೆಲೆ ಇಲ್ಲದ ಕಾರಣ ಹಾಗೂ ಅಕಾಲಿಕ ಮಳೆಯಿಂದ ರೈತರು ಸಂಕಷ್ಟದಲ್ಲಿರುವ ಪ್ರಯುಕ್ತ ಜಿಲ್ಲೆಯಲ್ಲಿ ಭತ್ತ ಬೆಳೆದ ರೈತರಿಗೆ ಹೆಚ್ಚಿನ ಆರ್ಥಿಕ ಹೊರೆಯಾಗಲಿದೆ. ಕಂಪ್ಲಿ ಮತ್ತು ಸಿರುಗುಪ್ಪ ತಾಲ್ಲೂಕುಗಳಲ್ಲಿ ಖಾಸಗಿ ಭತ್ತ ಕಟಾವು ಯಂತ್ರಗಳ ಮಾಲೀಕರು ರೈತರಿಂದ ಪ್ರತಿ ಗಂಟೆಗೆ ರೂ.2,500 ರಿಂದ ರೂ.3,000 ಗಳವರೆಗೆ ಬಾಡಿಗೆ ಹಣ ವಸೂಲಿ ಮಾಡುತ್ತಿರುವ ಬಗ್ಗೆ ರೈತರಿಂದ ದೂರುಗಳು ಕೇಳಿ ಬಂದಿರುತ್ತವೆ. ಈಗಾಗಲೇ ರೈತ ಮುಖಂಡರು ಮತ್ತು ಭತ್ತ ಕಟಾವು ಯಂತ್ರದ ಮಾಲೀಕರೊಂದಿಗೆ ಸಭೆ ನಡೆಸಿದ್ದು, ಅಂದಾಜು ರೂ.2300 ಗಳಿಗೆ ದರ ನಿಗದಿಪಡಿಸಿ ಕೊಡಲು ಕೋರಿರುತ್ತಾರೆ.

ಹಾಗಾಗಿ ಜಿಲ್ಲೆಯಲ್ಲಿರುವ ಭತ್ತ ಕಟಾವು ಯಂತ್ರದ ಮಾಲೀಕರು ರೂ.2,300 ದರಕ್ಕೆ ಮೀರದಂತೆ ಭತ್ತ ಕಟಾವು ಮಾಡಬೇಕು. ತಪ್ಪಿದ್ದಲ್ಲಿ ಭತ್ತ ಕಟಾವು ಯಂತ್ರದ ಮಾಲೀಕರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದ್ದಾರೆ.

## ಬಿ.ಡಿ.ಹಳ್ಳಿ ಮೊರಾರ್ಜಿ ವಸತಿ ಶಾಲೆಯ ವಿದ್ಯಾರ್ಥಿಗಳೊಂದಿಗೆ ಸಂವಾದ

# ಶೈಕ್ಷಣಿಕ ಪ್ರಗತಿಗೆ ಪೂರಕ ಅನ್ವೇಷಣೆ ಹೆಚ್ಚಲಿ

## ನಿವೃತ್ತ ನ್ಯಾ.ಸಂತೋಷ ಹೆಗ್ಡೆ ಹೇಳಿಕೆ | ಅತ್ಯಾಚಾರಿಗಳಿಗೆ ಏಕೆ ಬೇಗ ಶಿಕ್ಷೆಯಾಗುತ್ತಿಲ್ಲ ವಿದ್ಯಾರ್ಥಿನಿ ಪ್ರಶ್ನೆ

**ಹಂಪಿ ಟೈಮ್ಸ್ ಬಳ್ಳಾರಿ**

ಶೈಕ್ಷಣಿಕ ಪ್ರಗತಿಗೆ ಪೂರಕವಾದ ಹೊಸ ಅನ್ವೇಷಣೆಗಳು ಹೆಚ್ಚಾಗಬೇಕು ಎಂದು ಕರ್ನಾಟಕ ನಿವೃತ್ತ ಲೋಕಾಯುಕ್ತರು ಹಾಗೂ ಸುಪ್ರೀಂ ಕೋರ್ಟ್‌ನ ವಿಶ್ರಾಂತ ನ್ಯಾಯಾಧೀಶರಾದ ಸಂತೋಷ ಹೆಗ್ಡೆ ಅವರು ಹೇಳಿದರು.

ಬಳ್ಳಾರಿ ತಾಲ್ಲೂಕಿನ ಮೋಕಾದ ಭೈರದೇವನಹಳ್ಳಿಯ ಮೊರಾರ್ಜಿ ದೇಸಾಯಿ ಮಾದರಿ ವಸತಿ ಶಾಲೆಗೆ ಗುರುವಾರ ಭೇಟಿ ನೀಡಿದ ಅವರು, ಶಾಲೆಯಲ್ಲಿ ಚಿಕ್ಕಮಗಳೂರಿನ ಯುವಸ್ಫೂರ್ತಿ ಅಕಾಡೆಮಿ ಮತ್ತು ಬಿ.ಡಿ.ಹಳ್ಳಿ ಮೊರಾರ್ಜಿ ಮಾದರಿ ವಸತಿ ಶಾಲೆ ಇವರ ವತಿಯಿಂದ ವಿದ್ಯಾರ್ಥಿಗಳೊಂದಿಗೆ ಆಯೋಜಿಸಿದ್ದ ಸಂವಾದ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಶೈಕ್ಷಣಿಕ ಬೆಳವಣಿಗೆಯಲ್ಲಿ ವಿದ್ಯಾರ್ಥಿಗಳ ಕೊಡುಗೆ ಅಪಾರವಾಗಿದೆ. ಶಾಲೆಯಲ್ಲಿ ಉತ್ತಮ ವಿಜ್ಞಾನ ಪ್ರಯೋಗಾಯಲವಿದ್ದು, ಇದರ ಸದುಪಯೋಗಪಡೆದುಕೊಳ್ಳಬೇಕು ಎಂದರು.

ಇದೇ ಸಂದರ್ಭದಲ್ಲಿ ಮಕ್ಕಳಿಂದ ವಿಜ್ಞಾನದ ಪ್ರಯೋಗಗಳನ್ನು ಮಂಡಿಸಿ ಚರ್ಚಿಸಿದರು. ಶಾಲೆಯ ವಾತಾವರಣ ಕಂಡು ಹರ್ಷ ವ್ಯಕ್ತಪಡಿಸಿದರು. ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿನಿ ಕಲ್ಪನಾ ಅವರು, ಮಹಿಳೆಯರ ಮೇಲೆ ಅತ್ಯಾಚಾರ ಎಸಗಿದ ವ್ಯಕ್ತಿಗಳಿಗೆ ಏಕೆ ಬೇಗ ಶಿಕ್ಷೆಯಾಗುತ್ತಿಲ್ಲ ಮತ್ತು ತಂತ್ರಜ್ಞಾನ ಮುಂದುವರೆದರೂ ರೈತರಿಗೆ ಮತ್ತು ಸಾಮಾನ್ಯ ಜನರಿಗೆ ಸರಿಯಾಗಿ ಸಮಯಕ್ಕೆ ಏಕೆ ಸೌಲಭ್ಯಗಳು ದೊರೆಯುತ್ತಿಲ್ಲ ಎಂದು ನಿವೃತ್ತ ನ್ಯಾಯಾಧೀಶರನ್ನು ಪ್ರಶ್ನಿಸಿದರು.



ಇನ್ನೋರ್ವ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿನಿ ವಿದ್ಯಾಶ್ರೀ ಅವರು, ಮೀಸಲಾತಿಯನ್ನು ಸಂವಿಧಾನದಲ್ಲಿ ಕೇವಲ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಮಾತ್ರ ಸೀಮಿತವಾಗಿದೆಯೇ? ಎಂದು ಪ್ರಶ್ನಿಸಿದರು.

ಹೀಗೆ ಹಲವಾರು ವಿದ್ಯಾರ್ಥಿಗಳು ಸುಮಾರು ಪ್ರಶ್ನೆಗಳನ್ನು ಕೇಳಿದರು. ಬಳಿಕ ನಿವೃತ್ತ ನ್ಯಾಯಾಧೀಶರಾದ ಸಂತೋಷ ಹೆಗ್ಡೆ ಅವರು ಮಕ್ಕಳ ಪ್ರಶ್ನೆಗಳನ್ನು ಆಲಿಸುತ್ತಾ ಪ್ರಸ್ತುತ ದಿನಮಾನಗಳಲ್ಲಿರುವ ಪರಿಸ್ಥಿತಿಗಳ ಆಧಾರವಾಗಿಟ್ಟುಕೊಂಡು ಸವಿವರವಾಗಿ ಉತ್ತರಿಸಿದರು.

ಕಾರ್ಯಕ್ರಮದಲ್ಲಿ ಎಸ್‌ಎಸ್‌ಎಲ್‌ಸಿಯಲ್ಲಿ ಅತಿಹೆಚ್ಚು ಅಂಕ ಪಡೆದ ಶಾಲೆಯ ವಿದ್ಯಾರ್ಥಿಗಳಾದ ತರುಣ್ ಕುಮಾರ್.ಎಸ್.ಕೆ ಮತ್ತು ಸವಿತಾ.ಕೆ.ಎಂ ಅವರನ್ನು ಗಣ್ಯರು ಸನ್ಮಾನಿಸಿದರು.

ಜಿಪಂ ಸಿಇಒ ರಾಹುಲ್ ಶರಣಪ್ಪ ಸಂಕನೂರ, ಬಿಡಿ ಹಳ್ಳಿ ಗ್ರಾಪಂ ಸದಸ್ಯ ಹೊನ್ನಾರೆಡ್ಡಿ, ಯುವಸ್ಫೂರ್ತಿ ಅಕಾಡೆಮಿಯ ಅಧ್ಯಕ್ಷ ಸುಂದರೇಶ್, ರಾಜ್ಯ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಜಿಲ್ಲಾ ಸಮನ್ವಯ ಅಧಿಕಾರಿ, ಬಸವರಾಜ ಬನ್ನಿಹಟ್ಟಿ, ಬಿಡಿ ಹಳ್ಳಿ ಗ್ರಾಪಂ ಅಭಿವೃದ್ಧಿ ಅಧಿಕಾರಿ ವೀರಾರೆಡ್ಡಿ, ಬಿಡಿ ಹಳ್ಳಿ ಮೊರಾರ್ಜಿ ದೇಸಾಯಿ ಮಾದರಿ ವಸತಿ ಶಾಲೆಯ ಪ್ರಾಂಶುಪಾಲರಾದ ಅನುಸೂಯ.ಕೆ ಸೇರಿದಂತೆ ಶಾಲಾ ಸಿಬ್ಬಂದಿ ಮತ್ತೀತರರು ಉಪಸ್ಥಿತರಿದ್ದರು.



# SSLC ಈ ಬಾರಿ ಫಲಿತಾಂಶ ನಮ್ಮದೆ ಹೈಸ್ಕೋರ್‌ಗೆ ಈಗಿಂದಲೇ ಅಭ್ಯಾಸ ಮಾಡಿ

HAMPI TIMES MARGADARSHI

ಮನಸ್ಸು ಮಾಡು - ಕರ್ತವ್ಯ ನಿಷ್ಠನಾಗು - ಕಾದು ನೋಡು

ಹಂಪಿ ಟೈಮ್ಸ್ ಇ-ಪೇಪರ್‌ಗಾಗಿ ಭೇಟಿ ನೀಡಿ: https://epaper.hampitimes.com

ನಿನ್ನ ಬಾಳಿಗೆ ನೀನೆ ಶಿಲ್ಪಿ

ಹಂಪಿ ಟೈಮ್ಸ್ ಮಾರ್ಗದರ್ಶಿ SSLC: ಹಿಂದಿ

**10 ನೇ ತರಗತಿ** **ಹಿಂದಿ**

### महिला की साहसगाथा

**I . अनुरूपता :**

1)एवरेस्ट पर चढनेवाली पहली महिला : जुंके ताबी :: एवरेस्ट पर चढनेवाले पहले पुरुष : ------ **( तेनजिंग नोग्रे )**

2) कालानाग : पर्वत :: गंगोत्री : ---------- **( ग्लेशियर )**

3) कर्नल : खुल्लर :: मेजर : ---------- **( कुमार )**

**II . एक वाक्य में उत्तर लिखिए |**

4)बिछेंद्री पाल को कौन-सा गौरव प्राप्त हुआ है ?

**उत्तर :** बिछेंद्री पाल को **एवरेस्ट पर चढनेवाली पहली भारतीय महिला होने का** गौरव प्राप्त हुआ है |

5) बिछेंद्री ने क्या निश्चय किया ?

**उत्तर :** बिछेंद्री ने **पर्वतारोहण करने का** निश्चय किया |

6) कर्नल का नाम क्या था ?

**उत्तर : :** कर्नल का नाम **खुल्लर** था |

7) मेजर का नाम क्या था ?

**उत्तर : :** मेजर का नाम **कमार** था |

8) ल्हाटू कौन- सी रस्सी लाया था ?

**उत्तर :** ल्हाटू एक **नायलाँन की** रस्सी लाया था |

9) बिछेंद्री ने थैले से कौन-सा चित्र निकाला ?

**उत्तर :** बिछेंद्री ने थैले से **हनुमान चालीसा और दुर्गा माँ का** चित्र निकाला **उत्तर :**

9)सन् 1983 में दिल्ली में कौन-सा सम्मेलन हुआ था ?

**उत्तर :** सन् 1983 में दिल्ली में हिमालय पर्वतारोहियों का सम्मेलन हुआ था |

**III.दो - तीन वाक्यों में उत्तर लिखिए**

**10)बचेन्द्री पाल के परिवार का परिचय दीजिए ?**

**उत्तर :** बचेन्द्री पाल का जन्म साधारण भारतीय परिवार में हुआ था | पिता किशनपाल सिंह और माता हँसादेई नेगी की पाँच संतानों में यह तीसरी संतान है |

**11) बचेन्द्री पाल का बचपन कैसे बिता ?**

**उत्तर :** बचेन्द्री को बचपन में पाँच किलोमिटर पैदल चलकर स्कूल जाना पडता था | बाद में पर्वतारोहण- प्रशिक्षण के दौरान उनका कठोर परिश्रम बहुत काम आया | सिलाई का काम सीख लिया और सिलाई करके पढाई का खर्च जिटाने लगी | भाई के साथ पहाडो पर चढने जाती थी |

**12)बचेन्द्री ने पर्वतारोहण के लिए किन-किन चीजों का उपयोग किया ?**

**उत्तर :** बचेन्द्री ने पर्वतारोहण के लिए एक नायलाँन की रस्सी, बर्फ काटने के लिए एक फावडा, चार लीटर ऑक्सीजन और वाँकी-टाँकी आदीचीजों का उपयोग किया |

**13) महिला की साहसगाथा पाठ से अपको क्या संदेश मिलती ?**

**उत्तर :** महिला की साहसगाथा पाठ से हमें साहस गुण, दृढ निश्चय, अथक परिश्रम, मुसीबतों को सामना करना आदि आदर्श गुण सीखते हैं | इसके बाद हिमालय की ऊँची चोटियों की जानकारी भी मिलती है |

**IV. तीन-चार वाक्यों में उत्तर लिखिए |**

**13) एवरेस्ट की चोटी पर पहुँचकर बचेन्द्री ने क्या किया ?**

**उत्तर :** एवरेस्ट की चोटी पर पहुँचकर बचेन्द्री ने फावडे से पहले बर्फ की खुदाई करके अपने आप को सुरक्षित रूप से स्थिर किया | इसके बाद मैं अपने घुटनो के बल बैठी | बर्फ पर अपने माथे को लगाकर मैंने सागरमाथे के ताजा का चुंबन किया | बिना उठे ही मैंने अपने थैले से हनुमान चालीसा और दुर्गा माँ का चित्र निकाला | मैंने इन्हे अपने साथ लाए लाल कपडे में लपेटा और छोटी- सी पूजा करके इनको बर्फ में दबा दिया |

ಮುಂದುವರೆಯುವುದು -------

ಮಾರ್ಗದರ್ಶಿ ಶಿಕ್ಷಕರು : ಹೆಚ್.ತುಕಾರಾಮ್ ನಾಯ್ಕ, ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಮಗಿಮಾವಿನಹಳ್ಳಿ, ಹ.ಬೊ.ಹಳ್ಳಿ (ತಾ) ವಿಜಯನಗರ (ಜಿಲ್ಲೆ)

ಶ್ರೀ ಜಗದ್ಗುರು ಕೊಟ್ಟೂರುಸ್ವಾಮಿ ಸಂಸ್ಥಾನಮಠ, ಹೊಸಪೇಟೆ

## ನಿತ್ಯ ಪಂಚಾಂಗ

ಮಾಸ: ಕಾರ್ತಿಕ । ಸಂವತ್ಸರ: ಕ್ರೋಧಿ

**30–11–2024 – ಶನಿವಾರ**

| | |
|---|---|
| ತಿಥಿ | : ಚತುರ್ದಶಿ |
| ಪಕ್ಷ | : ಕೃಷ್ಣ |
| ನಕ್ಷತ್ರ | : ವಿಶಾಖ |
| ಯೋಗ | : ಅತಿಗಂಡ |
| ಕರಣ | : ಶಕುನಿ |
| ಸೂರ್ಯೋದಯ | : 06:52:10 |
| ಸೂರ್ಯಾಸ್ತ | : 17:39:14 |
| ರಾಹು ಕಾಲ | : 09:34–10:55 |
| ಯಮಘಂಡ ಕಾಲ | : 13:37–14:57 |
| ಗುಳಿಕ ಕಾಲ | : 06:57–08:13 |

## ತುಂಗಭದ್ರಾ ನೀರಿನ ಮಟ್ಟ



ಶುಕ್ರವಾರ : 29–11–2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1629.96 ಅಡಿ |
| ಒಳ ಹರಿವು | 2429 ಕ್ಯುಸೆಕ್ |
| ಹೊರ ಹರಿವು | 6507 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 93.909 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1593.69 ಅಡಿ |
| ಒಳ ಹರಿವು | 607 ಕ್ಯುಸೆಕ್ |
| ಹೊರ ಹರಿವು | 5467 ಕ್ಯುಸೆಕ್ |
| ಸಾಮರ್ಥ್ಯ | 14.389 ಟಿಎಂಸಿ |

ಭಾವಪೂರ್ಣ ಶ್ರದ್ಧಾಂಜಲಿ
ನಿಧನ - ಪುಣ್ಯ ಸ್ಮರಣೆ
ಜಾಹೀರಾತುಗಳಿಗೆ
ವಿಶೇಷ ರಿಯಾಯತಿ
ನಿಧನದ ಬಗ್ಗೆ ಕುಟುಂಬ, ಸ್ನೇಹಿತರು, ಮತ್ತು ಪರಿಚಿತರಿಗೆ ಶೀಘ್ರ ಮತ್ತು ಸರಿಯಾದ ಮಾಹಿತಿ ನೀಡಲು ಇದು ನೆರವಾಗುತ್ತದೆ.
ಜಾಹೀರಾತು ನೀಡಲು ಸಂಪರ್ಕಿಸಿ
ಹಂಪಿ ಟೈಮ್ಸ್
94486 33038

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದಲ್ಲಿ ಸಂಭ್ರಮದ ಸುವರ್ಣ ಕನ್ನಡ ರಾಜ್ಯೋತ್ಸವ; ಅದ್ದೂರಿ ಮೆರವಣಿಗೆ–ಹಬ್ಬದ ವಾತಾವರಣ ಸೃಷ್ಟಿ

# ಕನ್ನಡ ನಾಡಿನಲ್ಲಿ ಜನಿಸುವುದೇ ಪುಣ್ಯ

## ಬೆಂಗಳೂರು ವಿಶ್ವವಿದ್ಯಾಲಯದ ಉಪಕುಲಪತಿಗಳಾದ ಡಾ.ಜಯಕರ ಎಸ್.ಎಂ ಹೇಳಿಕೆ । ಕರ್ನಾಟಕ ರಾಜ್ಯೋತ್ಸವ 69

■ **ಹಂಪಿ ಟೈಮ್ಸ್ ಬಳ್ಳಾರಿ**

ಶ್ರೀಮಂತ ಸಂಸ್ಕೃತಿ, ಮನಸೂರೆಗೊಳ್ಳುವ ಕಲೆ, ಭೌಗೋಳಿಕ ವಿಶೇಷತೆ ಹಾಗೂ ವೈವಿಧ್ಯತೆಯಿಂದ ಕೂಡಿದ ಕನ್ನಡ ನಾಡಿನಲ್ಲಿ ಜನಿಸುವುದೇ ಪುಣ್ಯ ಎಂದು ಬೆಂಗಳೂರು ವಿಶ್ವವಿದ್ಯಾಲಯದ ಉಪಕುಲಪತಿಗಳಾದ ಡಾ.ಜಯಕರ ಎಸ್.ಎಂ ಅವರು ಹೇಳಿದರು.

ಇಲ್ಲಿನ ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಬಯಲು ರಂಗಮಂದಿರದಲ್ಲಿ ಶುಕ್ರವಾರ ಆಯೋಜಿಸಿದ್ದ ಸುವರ್ಣ ಕರ್ನಾಟಕ ಸಂಭ್ರಮ–ಕರ್ನಾಟಕ ರಾಜ್ಯೋತ್ಸವ–69 ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಕರ್ನಾಟಕದ ಪ್ರದೇಶಗಳಲ್ಲಿ ಒಂದು ಭಾಗದಿಂದ ಮತ್ತೊಂದು ಭಾಗದಲ್ಲಿ ಪ್ರಾದೇಶಿಕವಾರು ಮಾತನಾಡುವ ಭಾಷೆ ಶೈಲಿ, ಆಚಾರ–ವಿಚಾರ, ಉಡುಗೆ–ತೊಡುಗೆ ಬದಲಾವಣೆಗೊಳ್ಳುತ್ತದೆ. ಎಲ್ಲೇ ಇದ್ದರೂ ನಾವಾಡೋ ಮಾತು, ಉಸಿರಾಡೋ ಗಾಳಿ, ನಮ್ಮ ನಡೆ–ನುಡಿಯಲ್ಲೂ ಕನ್ನಡತವನ್ನು ಮೈಗೂಡಿಸಿಕೊಂಡು ವೈವಿಧ್ಯತೆಯಲ್ಲೂ ಏಕತೆಯನ್ನು ಎತ್ತಿಹಿಡಿಯಬೇಕು ಎಂದು ಆಶಯ ವ್ಯಕ್ತಪಡಿಸಿದರು.

ಕರ್ನಾಟಕ ರಾಜ್ಯ ಉದಯಗೊಂಡು 69 ವರ್ಷ ಕಳೆಯಿತು. ಈ ಮೊದಲು ಮೈಸೂರು ರಾಜ್ಯ ಎಂದು ಕರೆಯಲಾಗುತ್ತಿದ್ದ ರಾಜ್ಯವನ್ನು 1973ರಲ್ಲಿ ಕರ್ನಾಟಕ ಎಂದು ಮರು ನಾಮಕರಣ ಮಾಡಿದ 50 ವರ್ಷದ ಸಂಭ್ರಮದಲ್ಲಿ ನಾವಿದ್ದೇವೆ ಎಂದರು.

ಕನ್ನಡ ನಾಡಿನ ಜನರು ಇತರೆ ಭಾಗಗಳಿಗೆ ಹೋದರೂ ಕನ್ನಡವನ್ನು ಸಂಭ್ರಮಿಸುವ ಗುಣ ಹೊಂದಿದ್ದಾರೆ. ಐತಿಹಾಸಿಕ ಹಿನ್ನೆಲೆ ಹೊಂದಿದ ಕನ್ನಡ ಸಂಸ್ಕೃತಿಯನ್ನು ಉನ್ನತ ಮಟ್ಟಕ್ಕೆ ಬೆಳೆಸುವಲ್ಲಿ ಕನ್ನಡಾಭಿಮಾನಿಗಳು ಶ್ರಮಿಸಬೇಕು ಎಂದು ತಿಳಿಸಿದರು.

ನಾಡಿನ ಹಿರಿಯ ಸಾಹಿತಿ ಕುಂ.ವೀರಭದ್ರಪ್ಪ ಅವರು ಮಾತನಾಡಿ, ಕನ್ನಡ ಭಾಷೆಗೆ ಅವಿರತ ಇತಿಹಾಸವಿದೆ. ಅನೇಕ ಶಾಸನ, ಸಾಹಿತ್ಯ, ವಚನ, ಕೃತಿ, ಲೇಖನಗಳನ್ನು ಕೊಡುಗೆ ನೀಡುವಲ್ಲಿ ಕನ್ನಡ ಮೇರುಸ್ಥಾನ ಹೊಂದಿದ್ದು, ಕನ್ನಡದ ಇತಿಹಾಸವನ್ನು ಅರಿತು ಗೌರವಿಸಬೇಕು ಎಂದು ಹೇಳಿದರು.



ವೈವಿಧ್ಯಮಯ ನಾಡು, ಸರ್ವ ಜನಾಂಗದ ಶಾಂತಿಯ ತೋಟವಾದ ಕನ್ನಡ ನಾಡಿನಲ್ಲಿ ಜಾತಿ–ಧರ್ಮದ ಎಲ್ಲೆ ಮೀರಿ ಜೀವಿಸಲಾಗುತ್ತಿದ್ದು, ಕನ್ನಡಿಗರು ಪರಿಷ್ಕೃತ ಗುಣ ಬೆಳೆಸಿಕೊಳ್ಳಬೇಕು ಎಂದರು.

ಕನ್ನಡವನ್ನು ಕಟ್ಟಿ ಬೆಳೆಸಲು ಶ್ರಮಿಸಿದ ಆದಿಕವಿ ಪಂಪ, ಕುಮಾರವ್ಯಾಸ, ಬಸವಣ್ಣ, ಅಲ್ಲಮಪ್ರಭು, ಪುರಂದರ ದಾಸ, ಕನಕದಾಸ, ಕುವೆಂಪು, ದ.ರಾ.ಬೇಂದ್ರೆ, ಸೇರಿದಂತೆ ಕನ್ನಡ ಭಾಷೆ–ಸಾಹಿತ್ಯ ಏಳಿಗೆಗೆ ಕೊಡುಗೆ ನೀಡಿದ ಅನೇಕ ಮಹನೀಯರನ್ನು ಸ್ಮರಿಸಬೇಕಿರುವುದು ಪ್ರತಿಯೊಬ್ಬ ಕನ್ನಡಿಗರ ಕರ್ತವ್ಯ ಎಂದು ಹೇಳಿದರು.

ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡುವ ಪ್ರತಿ ವಿದ್ಯಾರ್ಥಿಯು ಸಂಸ್ಕಾರ ಹೊಂದಿರುತ್ತಾರೆ. ವಿವಿಯಲ್ಲಿ ಶೀಘ್ರವೇ ಕನ್ನಡ ಅಧ್ಯಯನ ವಿಭಾಗಕ್ಕೆ ಪೂರ್ಣಕಾಲಿಕ ಅಧ್ಯಾಪಕರುಗಳ ನೇಮಕಕ್ಕೆ ಮುತುವರ್ಜಿ ವಹಿಸಬೇಕು ಎಂದು ಒತ್ತಾಯಿಸಿದರು.

ಕೊಪ್ಪಳ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ.ಬಿ.ಕೆ. ರವಿ ಅವರು ರಾಜ್ಯೋತ್ಸವ ಅಂಗವಾಗಿ ಏರ್ಪಡಿಸಿದ್ದ ಮೆರವಣಿಗೆಗೆ ಚಾಲನೆ ನೀಡಿ ಮಾತನಾಡಿ, ವಿಜಯನಗರ ಸಾಮ್ರಾಜ್ಯ ಉದಯಿಸಿರುವ ಈ ಭಾಗ ಪವಿತ್ರ ಭೂಮಿಯಾಗಿದ್ದು, ಕಲೆ, ಸಾಹಿತ್ಯ, ಸಮಾಜಕ್ಕೆ ಅಪಾರ ಕೊಡುಗೆ ನೀಡಲು ಪ್ರತಿಯೊಬ್ಬರೂ ಮುಂದಾಗಬೇಕು ಎಂದರು.

ಯುವ ಪೀಳಿಗೆಯು ಹೆಚ್ಚಾಗಿ ಓದುವ ಹವ್ಯಾಸ ಬೆಳೆಸಿಕೊಳ್ಳಬೇಕು. ಕನ್ನಡ ಭಾಷೆ ತಪ್ಪು ಪ್ರಯೋಗವಾದಲ್ಲಿ ಧ್ವನಿ ಎತ್ತುವ ಕೆಲಸ ನಿರ್ವಹಿಸಿ, ಕನ್ನಡ ಭಾಷೆ–ಸಾಹಿತ್ಯ ಬಲಿಷ್ಠಗೊಳಿಸುವ ಕಾರ್ಯ ನಿರ್ವಹಿಸಬೇಕು ಎಂದು ಹೇಳಿದರು.

ಕನ್ನಡ ಭಾಷೆ, ಸಾಹಿತ್ಯ, ಜಾನಪದ ಸೊಗಡಿನ ಕುರಿತು ಮುಂದಿನ ಪೀಳಿಗೆಗೆ ಪರಿಚಯಿಸಬೇಕಿದೆ. ಕನ್ನಡ ಕೀಳರಿಮೆ ಭಾವನೆ ತ್ಯಜಿಸಿ ಸಮ ಸಮಾಜದ ಚಿಂತನೆ ಬೆಳೆಸಿಕೊಂಡು, ಕನ್ನಡತನವನ್ನು ಉಳಿಸಿ–ಬೆಳೆಸುವಲ್ಲಿ ಪ್ರತಿಯೊಬ್ಬರೂ ಕೈಜೋಡಿಸಬೇಕು ಎಂದು ತಿಳಿಸಿದರು.

ಇದೇ ವೇಳೆ ಗಣ್ಯರು ಭುವನೇಶ್ವರಿ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು. ಕಾರ್ಯಕ್ರಮದಲ್ಲಿ ಸಂಗೀತಾ ತಂಡದ ಗೀತೆಗಳು ಕನ್ನಡಾಭಿಮಾನಿಗಳಿಗೆ ಇಂಪು ನೀಡಿತು.

**ಸಂಭ್ರಮ–ಸಡಗರದ ಮೆರವಣಿಗೆ:**

ಸುವರ್ಣ ಕರ್ನಾಟಕ ಸಂಭ್ರಮ, ಕರ್ನಾಟಕ ರಾಜ್ಯೋತ್ಸವ–69 ಕಾರ್ಯಕ್ರಮ ಅಂಗವಾಗಿ ಏರ್ಪಡಿಸಿದ್ದ ಅದ್ದೂರಿ ಮೆರವಣಿಗೆಯು ತಾಯಿ ಭುವನೇಶ್ವರಿಯ ರಥದೊಂದಿಗೆ ಕುಂಭ ಹೊತ್ತ ಮಹಿಳೆಯ ಸಮ್ಮುಖದಲ್ಲಿ ವಿವಿಧ ಕಲಾತಂಡಗಳ ವಾದ್ಯಗಳ ಮೂಲಕ ರಾಜ್ಯದ 31 ಜಿಲ್ಲೆಗಳ ಸಂಸ್ಕೃತಿ, ವಿಶೇಷತೆ ಒಳಗೊಂಡ ಮಾಹಿತಿ ಕೈಪಿಡಿಯ ಚಿತ್ರಣ ಹಿಡಿದು, ಬುಲೆಟ್ ಬೈಕ್‌ಗಳ ಕಲರವದಿಂದ ವಿವಿಯ ಆವರಣದಲ್ಲಿ ಸಾಗಿಬಂದ ಮೆರವಣಿಗೆಯು ಸಂಭ್ರಮ–ಸಡಗರಕ್ಕೆ ಸಾಕ್ಷಿಯಾಯಿತು. ವಿವಿಧ ಕಲಾ ತಂಡಗಳಿಂದ ಜಾನಪದ ಕಲೆಗಳ ಪ್ರದರ್ಶನಕ್ಕೆ ಮೆರವಣಿಗೆಯು ಮೆರಗು ತಂದಿತು.

ಈ ಸಂದರ್ಭದಲ್ಲಿ ವಿವಿಯ ಕುಲಪತಿಗಳಾದ ಪ್ರೊ. ಎಂ.ಮುನಿರಾಜು, ಕನ್ನಡ ಸಾಹಿತ್ಯ ಪರಿಷತ್‌ನ ಜಿಲ್ಲಾಧ್ಯಕ್ಷ ಡಾ.ನಿಷ್ಠಿ ರುದ್ರಪ್ಪ, ಬಳ್ಳಾರಿಯ ಲೋಹಿಯಾ ಪ್ರಕಾಶನದ ಪ್ರಕಾಶಕ ಸಿ.ಚನ್ನಬಸವಣ್ಣ, ಕುಲಸಚಿವರಾದ ಎಸ್.ಎನ್ ರುದ್ರೇಶ್, ಮೌಲ್ಯಮಾಪನ ಕುಲಸಚಿವರಾದ ಪ್ರೊ. ರಮೇಶ್ ಓಲೇಕಾರ್, ಹಣಕಾಸು ಅಧಿಕಾರಿಗಳಾದ ನಾಗರಾಜ, ಕನ್ನಡ ಅಧ್ಯಯನ ವಿಭಾಗದ ಮುಖ್ಯಸ್ಥರಾದ ಪ್ರೊ.ರಾಬರ್ಟ್ ಜೋಸ್, ಸಿಂಡಿಕೇಟ್ ಸದಸ್ಯರಾದ ಪೀರ್ ಬಾಷಾ, ಶಿವಕುಮಾರ್ ಸೇರಿದಂತೆ ವಿವಿಧ ನಿಕಾಯಗಳ ಡೀನರು, ವಿದ್ಯಾ ವಿಷಯಕ ಪರಿಷತ್ ಸದಸ್ಯರು, ವಿಭಾಗದ ಮುಖ್ಯಸ್ಥರು, ಸಂಯೋಜಕರು, ಬೋಧಕ–ಬೋಧಕೇತರ ವರ್ಗ, ವಿದ್ಯಾರ್ಥಿಗಳು ಹಾಗೂ ಇತರರು ಉಪಸ್ಥಿತರಿದ್ದರು.




ನ.30ರಂದು ದತ್ತು ಗ್ರಾಮಗಳ ಅಡಿಗಲ್ಲು ಸಮಾರಂಭ । ಸಂಸದ ಕೆ.ರಾಜಶೇಖರ ಹಿಟ್ನಾಳ್ ಹೇಳಿಕೆ

# ಮೊರನಾಳ, ಕಾಮನೂರು ಸಮಗ್ರ ಅಭಿವೃದ್ಧಿಗೆ ದತ್ತು ಗ್ರಾಮಗಳಾಗಿ ಆಯ್ಕೆ

■ **ಹಂಪಿ ಟೈಮ್ಸ್ ಕೊಪ್ಪಳ**

ನರೇಗಾ ಯೋಜನೆಯಡಿ ಮೂಲಭೂತ ಸೌಕರ್ಯಗಳ ಸಮಗ್ರ ಅಭಿವೃದ್ಧಿಗೆ ಕೊಪ್ಪಳ ತಾಲ್ಲೂಕಿನ ಮೊರನಾಳ ಮತ್ತು ಕಾಮನೂರು ಗ್ರಾಮಗಳನ್ನು ದತ್ತು ಗ್ರಾಮಗಳನ್ನಾಗಿ ಆಯ್ಕೆ ಮಾಡಲಾಗಿದೆ ಎಂದು ಕೊಪ್ಪಳ ಲೋಕಸಭಾ ಕ್ಷೇತ್ರದ ಸಂಸದರಾದ ಕೆ.ರಾಜಶೇಖರ ಬಸವರಾಜ ಹಿಟ್ನಾಳ್ ಹೇಳಿದರು.

ಶುಕ್ರವಾರ ಕೊಪ್ಪಳ ನಗರದ ಪ್ರವಾಸಿ ಮಂದಿರದಲ್ಲಿ ದತ್ತು ಗ್ರಾಮಗಳ ಅಡಿಗಲ್ಲು ಸಮಾರಂಭ ಕುರಿತು ಮಾಹಿತಿ ನೀಡಲು ಕರೆದ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಪ್ರತಿ ಹಳ್ಳಿಗಳು ಸ್ವಾವಲಂಬಿಗಳಾಗಬೇಕೆಂಬುವುದು ಗಾಂಧೀಜಿಯವರ ಕನಸಾಗಿತ್ತು. ಭಾರತದ ಭವಿಷ್ಯವು ಹಳ್ಳಿಗಳಲ್ಲಿ ಅಡಗಿದೆ ಎಂದು ಅವರು ನಂಬಿದ್ದರು. ರಾಜಕೀಯ ಮತ್ತು ಆರ್ಥಿಕ ಪ್ರಜಾಪ್ರಭುತ್ವವನ್ನು ತಳಮಟ್ಟದಲ್ಲಿ ಪ್ರಾರಂಭಿಸಲು ಅತ್ಯಂತ ಸೂಕ್ತವಾದ ಸಾಧನವೆಂದರೆ ಪಂಚಾಯತ್ ರಾಜ್ ವ್ಯವಸ್ಥೆ, "ಸರಳ ಜೀವನ ಮತ್ತು ಉನ್ನತ ಚಿಂತನೆಯ ಮೂಲವನ್ನು ಆಧರಿಸಿ ಹಳ್ಳಿಗಳನ್ನು ಗ್ರಾಮ ಪಂಚಾಯಿತಿಗಳು ನಿಯಂತ್ರಿಸಿದರೆ ಭಾರತಕ್ಕೆ ಲಾಭವಾಗುತ್ತದೆ ಎಂಬ ಗಾಂಧೀಜಿಯವರ ನಂಬಿಕೆಯನ್ನು ಬಲಪಡಿಸುತ್ತದೆ ಎಂದರು.

ಕಳೆದ ತಿಂಗಳು ನಡೆದ ದಿಶಾ ಸಮಿತಿ ಸಭೆಯಲ್ಲಿ ಚರ್ಚಿಸಿದಂತೆ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ಕೊಪ್ಪಳ ವಿಧಾನಸಭಾ ಕ್ಷೇತ್ರದ ಬೆಟಗೇರಿ ಗ್ರಾಮ ಪಂಚಾಯತಿಯ ಮೊರನಾಳ ಗ್ರಾಮ ಮತ್ತು ಗಂಗಾವತಿ ವಿಧಾನಸಭಾ ಕ್ಷೇತ್ರಕ್ಕೆ ಒಳಪಡುವ ಲೇಬಗೇರಿ ಗ್ರಾಮ ಪಂಚಾಯತಿಯ ಕಾಮನೂರು ಗ್ರಾಮಗಳನ್ನು ದತ್ತು ಗ್ರಾಮಗಳನ್ನಾಗಿ ಆಯ್ಕೆ ಮಾಡಿಕೊಂಡು ಗ್ರಾಮಕ್ಕೆ ಅವಶ್ಯವಿರುವ ಎಲ್ಲಾ ಕಾಮಗಾರಿಗಳನ್ನು 2024–25ನೇ ಸಾಲಿನಲ್ಲಿ ಅನುಷ್ಠಾನಗೊಳಿಸಿ ಈ ಗ್ರಾಮಗಳನ್ನು ಮೂಲಭೂತ ಸೌಕರ್ಯ ಹೊಂದುವುದು ಮತ್ತು ಗ್ರಾಮೀಣ ನೈರ್ಮಲ್ಯ ಕಾಪಾಡುವ ಗ್ರಾಮಗಳನ್ನಾಗಿ ಅಭಿವೃದ್ಧಿಪಡಿಸುವದಾಗಿದೆ ಎಂದು ಹೇಳಿದರು.

ದತ್ತು ಗ್ರಾಮದ ಅಭಿವೃದ್ಧಿಗಾಗಿ ಮಹಾತ್ಮಾ ಗಾಂಧಿ ನರೇಗಾ ಯೋಜನೆಯಡಿ 2024–25ನೇ ಸಾಲಿನಲ್ಲಿ ಈಗಾಗಲೇ ಕ್ರಿಯಾ ಯೋಜನೆ ಸಿದ್ಧಪಡಿಸಿ ಜಿಲ್ಲಾ ಪಂಚಾಯತಿಯಿಂದ ಅನುಮೋದನೆ ಪಡೆಯಲಾಗಿದ್ದು ನ.30ರಂದು ಮೊರನಾಳ ಗ್ರಾಮದಲ್ಲಿ ಬೆಳಿಗ್ಗೆ 11 ಗಂಟೆಗೆ ಮತ್ತು ಅದೇ ದಿನದಂದು ಮಧ್ಯಾಹ್ನ 4 ಗಂಟೆಗೆ ಕಾಮನೂರು ಗ್ರಾಮದಲ್ಲಿ ಅಡಿಗಲ್ಲು ಸಮಾರಂಭವು ಜರುಗಲಿದೆ. ಈ ಸಮಾರಂಭದಲ್ಲಿ ಪರಮಪೂಜ್ಯ ಗವಿಮಠ ಶ್ರೀಗಳಾದ ಶ್ರೀ ಅಭಿನವ ಗವಿಸಿದ್ದೇಶ್ವರ ಮಹಾಸ್ವಾಮಿಗಳು, ಶಾಸಕರು, ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜನಪ್ರತಿನಿಧಿಗಳು ಸೇರಿದಂತೆ ಆಯಾ ಗ್ರಾಮಗಳ ಜನರು ಭಾಗವಹಿಸಲಿದ್ದಾರೆ.

ಎರಡೂ ಗ್ರಾಮಗಳ ಕಾಮಗಾರಿಗಳನ್ನು ನ.30ರಿಂದ ಪ್ರಾರಂಭಿಸಿ ಮಾರ್ಚ್–2025ರ ಮಾಹೆಯ ಅಂತ್ಯಕ್ಕೆ ಪೂರ್ಣಗೊಳಿಸುವ ಗುರಿ ನಿಗದಿಪಡಿಸಲಾಗಿದೆ ಎಂದು ಹೇಳಿದರು.

ಜಿಲ್ಲಾ ಅಭಿವೃದ್ಧಿ ಸಮನ್ವಯ ಮತ್ತು ಉಸ್ತುವಾರಿ (ದಿಶಾ) ಸಮಿತಿ ಸದಸ್ಯರಾದ ಸರಸ್ವತಿ ಇಟ್ಟಂಗಿ ಹಾಗೂ ಅಂಬಣ್ಣ, ಕೊಪ್ಪಳ ನಗರಸಭೆ ಸದಸ್ಯರಾದ ರಾಜಶೇಖರ ಆಡೂರ, ಗಣ್ಯರಾದ ಕೃಷ್ಣ ಇಟ್ಟಂಗಿ ಸೇರಿದಂತೆ ಮತ್ತಿತರರಿದ್ದರು.



### ಕಾಮನೂರು ಗ್ರಾಮದ ಅಭಿವೃದ್ಧಿಗೆ 4.62 ಕೋಟಿ ರೂ. ಅನುದಾನ

ಕಾಮನೂರು ಗ್ರಾಮದಲ್ಲಿ ಕೆರೆ ಅಭಿವೃದ್ಧಿ, ವೈಯಕ್ತಿಕ ಕೃಷಿ ಹೊಂಡ ಕಾಮಗಾರಿ, ಬದು ನಿರ್ಮಾಣ, ವೈಯಕ್ತಿಕ ಬಚ್ಚಲ ಗುಂಡಿ, ದನದ ದೊಡ್ಡಿ, ಕುರಿ–ಮೇಕೆ ಸಾಕಾಣಿಕೆ ಶೆಡ್, ಶಾಲಾ ಕಂಪೌಂಡ್, ಶಾಲಾ ಶೌಚಾಲಯ, ಶಾಲಾ ಆಟದ ಮೈದಾನ, ಶಾಲಾ ಪೋಷ್ಟಕ ತೋಟ, ಶಾಲಾ ಅಡುಗೆ ಕೋಣೆ, ಗ್ರಾಮೀಣ ಗೋದಾಮು, ಹೊಸ ಅಂಗನವಾಡಿ, ಎನ್.ಆರ್.ಎಲ್.ಎಂ ಶೆಡ್, ಗ್ರಾಮೀಣ ಸಂತೆ ಕಟ್ಟೆ, ರಸ್ತೆ ಕಾಮಗಾರಿಗಳು, ಚರಂಡಿ ಕಾಮಗಾರಿಗಳು, ಸ್ಮಶಾನ ಅಭಿವೃದ್ಧಿ, ತೋಟಗಾರಿಕೆ ಇಲಾಖೆ ಕಾಮಗಾರಿಗಳಿಗೆ ನರೇಗಾ ಯೋಜನೆಯಡಿ 4.47 ಕೋಟಿ ರೂ. ಮೊತ್ತದಲ್ಲಿ ಮತ್ತು ಸಂಸದರ ನಿಧಿಯಲ್ಲಿ 15 ಲಕ್ಷ ರೂ. ವೆಚ್ಚದಲ್ಲಿ ಗ್ರಾಮದಲ್ಲಿ ಎಲ್.ಇ.ಡಿ ವಿದ್ಯುತ್ ದೀಪಗಳ ಅಳವಡಿ ಸೇರಿದಂತೆ ಒಟ್ಟು 4.62 ಕೋಟಿ ರೂ. ಅನುದಾನದಲ್ಲಿ ಕಾಮನೂರು ಗ್ರಾಮದ ಅಭಿವೃದ್ಧಿಗೆ ವಿಶೇಷ ಒತ್ತು ನೀಡಲಾಗುತ್ತಿದೆ ಎಂದರು.

### ಮೊರನಾಳ ಗ್ರಾಮ ಅಭಿವೃದ್ಧಿಗೆ 5.13 ಕೋಟಿ ರೂ. ಅನುದಾನ

ಮೊರನಾಳ ಗ್ರಾಮದಲ್ಲಿ ಕರೆ ಅಭಿವೃದ್ಧಿ, ವೈಯಕ್ತಿಕ ಕೃಷಿ ಹೊಂಡ ಕಾಮಗಾರಿ, ಬದು ನಿರ್ಮಾಣ, ದನದ ದೊಡ್ಡಿ, ಕುರಿ–ಮೇಕೆ ಸಾಕಾಣಿಕೆ ಶೆಡ್, ಶಾಲಾ ಕಂಪೌಂಡ್, ಶಾಲಾ ಶೌಚಾಲಯ, ಶಾಲಾ ಆಟದ ಮೈದಾನ, ಶಾಲಾ ಮಳೆ ನೀರಿನ ಕೊಯ್ಲು, ಶಾಲಾ ಅಡುಗೆ ಕೋಣೆ, ಗ್ರಾಮೀಣ ಗೋದಾಮು, ಹೊಸ ಅಂಗನವಾಡಿ ಕಟ್ಟದ ನಿರ್ಮಾಣ, ರಸ್ತೆ ಕಾಮಗಾರಿಗಳು, ಚರಂಡಿ ಕಾಮಗಾರಿಗಳು, ಸ್ಮಶಾನ ಅಭಿವೃದ್ಧಿ ಹಾಗೂ ತೋಟಗಾರಿಕೆ ಇಲಾಖೆ ಕಾಮಗಾರಿಗಳಿಗೆ ನರೇಗಾ ಯೋಜನೆಯಡಿ 4.98 ಕೋಟಿ ರೂ. ಮೊತ್ತದಲ್ಲಿ ಮತ್ತು ಸಂಸದರ ನಿಧಿಯಲ್ಲಿ 15 ಲಕ್ಷ ರೂ. ವೆಚ್ಚದಲ್ಲಿ ಈ ಗ್ರಾಮದಲ್ಲಿ ಎಲ್.ಇ.ಡಿ ವಿದ್ಯುತ್ ದೀಪಗಳ ಅಳವಡಿ ಸೇರಿದಂತೆ ಒಟ್ಟು 5.13 ಕೋಟಿ ರೂ. ಅನುದಾನದಲ್ಲಿ ಮೊರನಾಳ ಗ್ರಾಮದ ಸಮಗ್ರ ಅಭಿವೃದ್ಧಿಗೆ ವಿಶೇಷ ಗಮನ ಹರಿಸಲಾಗುತ್ತಿದೆ ಎಂದು ಹೇಳಿದರು.

## ಕರ್ನಾಟಕ ರೈತ ಸಮೃದ್ಧಿ ಯೋಜನೆಯಡಿ ರೈತರು ಅರ್ಜಿ ಸಲ್ಲಿಸಿ

**ಹಂಪಿ ಟೈಮ್ಸ್ ಕೊಪ್ಪಳ**

ಕೊಪ್ಪಳ ಜಿಲ್ಲೆಯ ರೈತರು 2024–25ನೇ ಸಾಲಿನಲ್ಲಿ ಕರ್ನಾಟಕ ರೈತ ಸಮೃದ್ಧಿ ಯೋಜನೆಯಡಿ ಅರ್ಜಿ ಸಲ್ಲಿಸುವಂತೆ ಜಂಟಿ ಕೃಷಿ ನಿರ್ದೇಶಕ ರುದ್ರೇಶಪ್ಪ ಟಿ.ಎಸ್ ಅವರು ತಿಳಿಸಿದ್ದಾರೆ.

"ಕರ್ನಾಟಕ ರೈತ ಸಮೃದ್ಧಿ ಯೋಜನೆ" ಯನ್ನು ರಾಜ್ಯದ ಎಲ್ಲಾ ಜಿಲ್ಲೆಗಳ ಎಲ್ಲಾ ತಾಲ್ಲೂಕುಗಳಲ್ಲಿ ಅನುಷ್ಠಾನಗೊಳಿಸಲು ಮಾರ್ಗಸೂಚಿಯನ್ವಯ ಸರ್ಕಾರವು ಅನುಮೋದನೆ ನೀಡಿ ಆದೇಶ ಹೊರಡಿಸಲಾಗಿದ್ದು, ಕೃಷಿ ಕ್ಷೇತ್ರವನ್ನು ಸುಸ್ಥಿರ ಹಾಗೂ ಲಾಭದಾಯಕವಾಗಿಸಲು ವಿವಿಧ ರೈತಪರ ಯೋಜನೆಗಳನ್ನು ಒಗ್ಗೂಡಿಸಿ ಸಮಗ್ರ ಕೃಷಿಯನ್ನು ಉತ್ತೇಜಿಸಲು "ಕರ್ನಾಟಕ ರೈತ ಸಮೃದ್ಧಿ ಯೋಜನೆ"ಯನ್ನು ಅನುಷ್ಠಾನಗೊಳಿಸಲು ಯೋಜಿಸಲಾಗಿದೆ. ಕೃಷಿ ಭಾಗ್ಯ ಫಲಾನುಭವಿಗಳನ್ನು ಕೇಂದ್ರ ಬಿಂದುವಾಗಿರಿಸಿಕೊಂಡು ಚಾಲ್ತಿ ಯೋಜನೆಗಳನ್ನು ಒಗ್ಗೂಡಿಸಿ ಸಮಗ್ರ ಕೃಷಿ ಉತ್ತೇಜಿಸುವುದರ ಜೊತೆಗೆ ಕೃಷಿ ಕ್ಷೇತ್ರವನ್ನು ಸುಸ್ಥಿರ ಹಾಗೂ ಲಾಭದಾಯಕಾಗಿಸುವುದು ಹಾಗೂ ಸದರಿ ರೈತರನ್ನು "ಮಾದರಿ ಸಮೃದ್ಧ ರೈತರನ್ನಾಗಿ" ರೂಪಿಸುವುದು ಈ ಯೋಜನೆಯ ಮುಖ್ಯ ಧ್ಯೇಯವಾಗಿರುತ್ತದೆ.

"ಸಮಗ್ರ ಕೃಷಿ ಪದ್ಧತಿ" ಘಟಕದಡಿ ಜಿಲ್ಲೆಯ ರೈತರಿಂದ ಅರ್ಜಿ ಆಹ್ವಾನಿಸಲಾಗಿದ್ದು, 2023–24ನೇ ಸಾಲಿನ ಕೃಷಿಭಾಗ್ಯ ಯೋಜನೆಯ ಫಲಾನುಭವಿಗಳಲ್ಲಿ ಸುಸ್ಥಿತಿಯಲ್ಲಿರುವ ಘಟಕಗಳಿರುವ ಯಾವುದೇ ಆಸಕ್ತರು 2024ರ ಡಿಸೆಂಬರ್ 10ರೊಳಗಾಗಿ ಹತ್ತಿರದ ರೈತ ಸಂಪರ್ಕ ಕೇಂದ್ರದಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ. ಜಿಲ್ಲೆಯ 2023–24ನೇ ಸಾಲಿನ ಕೃಷಿಭಾಗ್ಯ ಯೋಜನೆಯ ರೈತ ಬಾಂಧವರು ಈ ಕಾರ್ಯಕ್ರಮದಡಿ ನೋಂದಣಿ ಮಾಡಿಕೊಳ್ಳಬೇಕು.

ಹೆಚ್ಚಿನ ಮಾಹಿತಿಗಾಗಿ ಹಾಗೂ ಅರ್ಜಿ ನಮೂನೆಯನ್ನು ಪಡೆಯಲು ಸಂಬಂಧಿಸಿದ ರೈತ ಸಂಪರ್ಕ ಕೇಂದ್ರಗಳಲ್ಲಿ ಅಥವಾ ಸಹಾಯಕ ಕೃಷಿ ನಿರ್ದೇಶಕರ ಕಛೇರಿಯಿಂದ ಪಡೆಯಬಹುದಾಗಿದೆ.

## ಆನಂದ ಬಾಣ




14 ಭಾಷೆಗಳಲ್ಲಿ
ಹಂಪಿ ಟೈಮ್ಸ್ ವೆಬ್‌ನ್ಯೂಸ್‌ಗೆ ಭೇಟಿ ನೀಡಿ, ನಿಮ್ಮ ಮಾತೃಭಾಷೆಯಲ್ಲಿ ಸುದ್ದಿ, ಲೇಖನ ಓದಿರಿ...
www.hampitimes.com

## ವಸತಿ ಸೌಲಭ್ಯಕ್ಕಾಗಿ ಆಯ್ಕೆಯಾದವರಿಗೆ ಕೂಡಲೇ ಮನೆ ಕಟ್ಟಡ ಪೂರ್ಣಗೊಳಿಸಿಕೊಡಿ

**ಹಂಪಿ ಟೈಮ್ಸ್ ಬಳ್ಳಾರಿ**

ಬಳ್ಳಾರಿ ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ 2010–11 ರಿಂದ 2018–19ನೇ ಸಾಲಿನ ರಾಜ್ಯ ಮತ್ತು ಕೇಂದ್ರ ಸರ್ಕಾರದ ವಿವಿಧ ನಗರ ವಸತಿ ಯೋಜನೆಗಳಡಿ ವಸತಿ ಸೌಲಭ್ಯಕ್ಕಾಗಿ ಆಯ್ಕೆಯಾಗಿರುವ ಫಲಾನುಭವಿಗಳು ಕೂಡಲೇ ತಮ್ಮ ಮನೆಯ ಕಟ್ಟಡವನ್ನು ಪೂರ್ಣಗೊಳಿಸಿಕೊಳ್ಳುವಂತೆ ಮಹಾನಗರ ಪಾಲಿಕೆಯು ಸೂಚಿಸಿದೆ.

ಈಗಾಗಲೇ ಹಲವಾರು ಬಾರಿ ನೋಟಿಸ್ ಜಾರಿ ಮಾಡಲಾಗಿದ್ದು, ಫಲಾನುಭವಿಗಳು ಮನೆಯ ಕಟ್ಟಡವನ್ನು ಡಿ.05ರೊಳಗಾಗಿ ಪೂರ್ಣಗೊಳಿಸಿಕೊಳ್ಳಬೇಕು. ಇಲ್ಲವಾದಲ್ಲಿ ಈಗಾಗಲೇ ಬಿಡುಗಡೆಯಾಗಿರುವ ಪೂರ್ಣ ಪ್ರಮಾಣದ ಕೇಂದ್ರ ಮತ್ತು ರಾಜ್ಯ ಸರ್ಕಾರದ ಸಹಾಯಧನವನ್ನು ಹಿಂದುರಿಗಿಸಲು ಬೆಂಗಳೂರು ರಾಜೀವ್‌ಗಾಂಧಿ ವಸತಿ ನಿಗಮ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಕಚೇರಿಯು ಫಲಾನುಭವಿಗಳಿಗೆ ತಿಳಿಸಿ ನೋಟಿಸ್ ಜಾರಿ ಮಾಡುವಂತೆ ತಿಳಿಸಿದೆ.

ಹಾಗಾಗಿ ವಿವಿಧ ನಗರ ವಸತಿ ಸೌಲಭ್ಯಕ್ಕಾಗಿ ಆಯ್ಕೆಯಾದ ಫಲಾನುಭವಿಗಳು ಮನೆಯ ಕಟ್ಟಡವನ್ನು ಹಂತ ಹಂತವಾಗಿ ನಿರ್ಮಾಣ ಮಾಡಿಕೊಂಡು ಮಹಾನಗರಪಾಲಿಕೆಯ ಆಶ್ರಯ ಶಾಖೆಯ ಗಮನಕ್ಕೆ ತರಬೇಕು. ಇಲ್ಲವಾದಲ್ಲಿ, ರಾಜ್ಯ ಮತ್ತು ಕೇಂದ್ರ ಸಹಾಯಧನ ಬಿಡುಗಡೆ ಆಗುವುದಿಲ್ಲ. ಇದಕ್ಕೆ ಮಹಾನಗರ ಪಾಲಿಕೆ ಹೊಣೆಯಾಗಿರುವುದಿಲ್ಲ ಮತ್ತು ಮನೆ ರದ್ದು ಮಾಡಲು ಸರ್ಕಾರಕ್ಕೆ ನಿಯಮಾನುಸಾರ ಶಿಫಾರಸ್ಸು ಮಾಡಲಾಗುವುದು ಎಂದು ಬಳ್ಳಾರಿ ಮಹಾನಗರ ಪಾಲಿಕೆ ತಿಳಿಸಿದೆ.